# ಎಚ್ಚರ!

ನಂ. 1 2017



## ಬೈಬಲ್ ನಿಜಕ್ಕೂ
# ದೇವರ ಪುಸ್ತಕನಾ?

# ಎಚ್ಚರ!



3 ಮುಖಪುಟ ಲೇಖನ
ಬೈಬಲನ್ನು ನಿಜವಾಗಿಯೂ ದೇವರೇ ಬರೆಸಿದ್ದಾ?

*ಬೈಬಲ್ ದೇವರ ಪುಸ್ತಕನಾ? ಅಥವಾ ಅದರಲ್ಲಿರುವುದೆಲ್ಲಾ ಮನುಷ್ಯರ ಆಲೋಚನೆಗಳಾ?*

*"ಎಚ್ಚರ!" ಪತ್ರಿಕೆಯ ಈ ಸಂಚಿಕೆಯು ಬೈಬಲನ್ನು ಬರೆಯಲು ಬರಹಗಾರರನ್ನು ಪ್ರೇರಿಸಿದ್ದು ದೇವರೇ ಎಂದು ನಂಬಲು 3 ಆಧಾರಗಳ ಬಗ್ಗೆ ತಿಳಿಸುತ್ತದೆ.*

## ಮತ್ತೇನಿದೆ . . .

8 ಸುಖೀ ಸಂಸಾರಕ್ಕೆ ಸಲಹೆಗಳು
ಮಕ್ಕಳಿಗೆ ಕೆಲಸ ಕೊಡಬೇಕಾ?

10 ಕರುಳಿನ ನರಮಂಡಲ
—ನಮ್ಮ "ಎರಡನೇ ಮೆದುಳು!"

12 ಸಂದರ್ಶನ
ಒಬ್ಬ ಸಾಫ್ಟ್‌ವೇರ್ ವಿನ್ಯಾಸಕ ತನ್ನ ನಂಬಿಕೆಯ ಬಗ್ಗೆ ಮಾತಾಡುತ್ತಾರೆ

14 ದೇವರ ದೃಷ್ಟಿಕೋನ
ದೇವದೂತರು

16 ವಿಕಾಸವೇ? ವಿನ್ಯಾಸವೇ?
ನೀರುನಾಯಿಯ ಕೂದಲು

## JW.ORG™ ಇಂಟರ್‌ನೆಟ್‌ನಲ್ಲಿ ಲಭ್ಯ . . .

### ವಿಡಿಯೋಗಳು



WHITEBOARD ANIMATIONS

**ಸಾಕಷ್ಟು ಸ್ವಾತಂತ್ರ್ಯ ಸಿಗಬೇಕಂದರೆ ಏನು ಮಾಡಬೇಕು?**

ಬೇರೆಯವರು ನಿಮ್ಮನ್ನು ಇನ್ನೂ ಚಿಕ್ಕ ಮಕ್ಕಳಂತೆ ನೋಡದೆ ದೊಡ್ಡವರಂತೆ ನೋಡಬೇಕು ಅಂತ ನಿಮಗನಿಸುತ್ತದೆ. ಆದರೆ ನಿಮ್ಮ ಹೆತ್ತವರು ಅದಕ್ಕೆ ತದ್ವಿರುದ್ಧ. ಅವರ ನಂಬಿಕೆ ಗಳಿಸಲು ನೀವು ಏನು ಮಾಡಬಹುದು?

(BIBLE TEACHINGS > TEENAGERS ನೋಡಿ)



BIBLE TEACHINGS

**ಬೈಬಲನ್ನು ಯಾರು ಬರೆಸಿದರು?**

ಬೈಬಲನ್ನು ಬರೆದಿದ್ದು ಮನುಷ್ಯರು ಅಂದಮೇಲೆ ಅದನ್ನು ದೇವರ ವಾಕ್ಯ ಎಂದು ಹೇಗೆ ಹೇಳಬಹುದು?

(ಪ್ರಕಾಶನಗಳು > ವಿಡಿಯೋಗಳು ಎಂಬಲ್ಲಿ "The Bible" ಎಂಬ ವಿಭಾಗ ನೋಡಿ)

Vol. 98, No. 3 / Bimonthly / KANNADA

ಪ್ರತಿ ಸಂಚಿಕೆಯ ಮುದ್ರಣ: 117 ಭಾಷೆಗಳಲ್ಲಿ 6,02,40,000 ಪ್ರತಿಗಳು

ಈ ಪ್ರಕಾಶನ ಮಾರಾಟಕ್ಕಿಲ್ಲ. ಸ್ವಯಂ ಪ್ರೇರಿತ ಕಾಣಿಕೆಗಳ ಸಹಾಯದಿಂದ ಮಾಡಲಾಗುವ ಭೂವ್ಯಾಪಕ ಬೈಬಲ್ ಶಿಕ್ಷಣ ಕಾರ್ಯಕ್ರಮದ ಭಾಗವಾಗಿ ಇದನ್ನು ಹೊರತರಲಾಗಿದೆ. ಕಾಣಿಕೆ ನೀಡಲು www.jw.orgಗೆ ಭೇಟಿ ನೀಡಿ.

*ಹೀಬ್ರು ಶಾಸ್ತ್ರಗಳಿಂದ ಉಲ್ಲೇಖಿಸಲಾಗಿರುವ ವಚನಗಳು 'ಸತ್ಯವೇದವು' ಬೈಬಲಿನಿಂದಾಗಿವೆ ಮತ್ತು ಗ್ರೀಕ್ ಶಾಸ್ತ್ರಗಳಿಂದ ಉಲ್ಲೇಖಿಸಲಾಗಿರುವ ವಚನಗಳು ಕ್ರೈಸ್ತ ಗ್ರೀಕ್ ಶಾಸ್ತ್ರಗ್ರಂಥದ ನೂತನ ಲೋಕ ಭಾಷಾಂತರ ಬೈಬಲಿನಿಂದಾಗಿವೆ. ಬೇರೆ ಭಾಷಾಂತರಗಳಿಂದ ತೆಗೆದಿರುವಲ್ಲಿ ಅದನ್ನು ವಚನದ ಪಕ್ಕದಲ್ಲಿ ಸೂಚಿಸಲಾಗಿದೆ.*

*Awake!* (ISSN 0005-237X) Issue 3 June 2017 is published bimonthly by THE WATCH TOWER BIBLE AND TRACT SOCIETY OF INDIA.; 927/1 Addevishwanathapura, Rajanukunte, Bengaluru 560 064, Karnataka. © 2017 Watch Tower Bible and Tract Society of Pennsylvania.

**ಹೆಚ್ಚಿನ ಮಾಹಿತಿ ಪಡೆಯಲು ಅಥವಾ ಮನೆಯಲ್ಲಿಯೇ ಬೈಬಲಿನ ಕುರಿತು ಉಚಿತವಾಗಿ ಕಲಿಯಲು ಬಯಸುತ್ತೀರಾ?**

ಹಾಗಿರುವಲ್ಲಿ www.jw.org/kn ಸಂದರ್ಶಿಸಿ ಅಥವಾ ಈ ವಿಳಾಸದ ಮೂಲಕ ನಿಮ್ಮ ವಿನಂತಿಯನ್ನು ಕಳುಹಿಸಿ.

**JEHOVAH'S WITNESSES:** INDIA: PO Box 6441, Yelahanka, Bengaluru-KAR 560 064. BRITAIN: The Ridgeway, London, NW7 1RN. ಭೂಮಿಯಾದ್ಯಂತ ಇರುವ ನಮ್ಮ ಎಲ್ಲ ಬ್ರಾಂಚ್‌ಗಳ ವಿಳಾಸಗಳು www.jw.org/en/contactನಲ್ಲಿವೆ.

# ಬೈಬಲನ್ನು ನಿಜವಾಗಿಯೂ ದೇವರೇ ಬರೆಸಿದ್ದಾ?

**ಬೈಬಲನ್ನು** ಬರೆಸಿದ್ದು ದೇವರೇ ಅಂತ ನೀವು ನಂಬುತ್ತೀರಾ? ಅಥವಾ ಮನುಷ್ಯರು ಅವರಿಗನಿಸಿದ್ದನ್ನು ಬರೆದಿದ್ದಾರೆ ಅಂತ ನಿಮಗನಿಸುತ್ತಾ?

ಕ್ರೈಸ್ತರು ಅಂತ ಹೇಳಿಕೊಳ್ಳುವ ಅನೇಕರ ಮಧ್ಯೆ ಇದು ಮುಗಿಯದ ಚರ್ಚೆಯಾಗಿದೆ. ಉದಾಹರಣೆಗೆ, ಅಮೆರಿಕಾದಲ್ಲಿ ನಡೆದ 2014ರ ಸಮೀಕ್ಷೆ ಒಂದರಲ್ಲಿ ಕ್ರೈಸ್ತರೆಂದು ಹೇಳಿಕೊಳ್ಳುವವರಲ್ಲಿ ಹೆಚ್ಚಿನ ಜನ 'ಬೈಬಲ್ ಬರೆಸುವುದರಲ್ಲಿ ಸ್ವಲ್ಪನಾದರೂ ದೇವರ ಕೈ ಇದೆ' ಅಂತ ಹೇಳಿದರು. ಆದರೆ ಸಮೀಕ್ಷೆಯಲ್ಲಿನ ಪ್ರತಿ 5 ಜನರಲ್ಲಿ ಒಬ್ಬರು ಬೈಬಲಲ್ಲಿರೋದು "ಹಳೇಕಾಲದ ಕಥೆಗಳು, ಇತಿಹಾಸ ಮತ್ತು ಮನುಷ್ಯರ ಯೋಚನೆಗಳು ಅಷ್ಟೇ" ಎಂದು ಹೇಳಿದರು. ಆದರೆ ಬೈಬಲ್ "ದೇವರಿಂದ ಪ್ರೇರಿತವಾಗಿದೆ" ಅಂತ ಸ್ವತಃ ಬೈಬಲೇ ಹೇಳುತ್ತದೆ. ಏನಿದರ ಅರ್ಥ? —2 ತಿಮೊಥೆಯ 3:16.

## "ದೇವರಿಂದ ಪ್ರೇರಿತ"—ಏನಿದರ ಅರ್ಥ?

ಬೈಬಲಲ್ಲಿ ಒಟ್ಟು 66 ಚಿಕ್ಕ ಪುಸ್ತಕಗಳಿವೆ. ಇದನ್ನು 40 ಜನ ಸುಮಾರು 1,600 ವರ್ಷಗಳ ಅವಧಿಯಲ್ಲಿ ಬರೆದಿದ್ದಾರೆ. ಬೈಬಲನ್ನು ಬರೆದದ್ದು ಮನುಷ್ಯರು ಅಂದಮೇಲೆ, ದೇವರಿಂದ ಪ್ರೇರಿತ ಅನ್ನುವುದರ ಅರ್ಥವೇನು? ದೇವರಿಂದ ಪ್ರೇರಿತ ಅಂದರೆ ಬೈಬಲಿನಲ್ಲಿರುವ ವಿಷಯದ **ಮೂಲವು** ದೇವರಾಗಿದ್ದಾನೆ ಎಂದರ್ಥ. ಆದ್ದರಿಂದಲೇ "ಮನುಷ್ಯರು ಪವಿತ್ರಾತ್ಮದಿಂದ ಮಾರ್ಗದರ್ಶಿಸಲ್ಪಟ್ಟು ದೇವರಿಂದ ಹೊಂದಿದ್ದನ್ನೇ ಮಾತಾಡಿದರು" ಎಂದು ಬೈಬಲ್ ಹೇಳುತ್ತದೆ. (2 ಪೇತ್ರ 1:21) ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ದೇವರು ತನ್ನ ಸಂದೇಶವನ್ನು ಬೈಬಲ್ ಬರಹಗಾರರಿಗೆ ಪವಿತ್ರಾತ್ಮ ಶಕ್ತಿಯ ಮೂಲಕ ತಿಳಿಸಿದನು. ಒಬ್ಬ ಯಜಮಾನ ಒಂದು ಪತ್ರ ಬರೆಯಲು ತನ್ನ ಕೆಲಸಗಾರನಿಗೆ ಹೇಳುವಾಗ ಅದರಲ್ಲಿ ಏನೆಲ್ಲಾ ಇರಬೇಕೆಂದು ಹೇಳುತ್ತಾನೆ. ಅದೇ ರೀತಿ ದೇವರು ಬೈಬಲ್ ಎಂಬ ಪತ್ರದಲ್ಲಿ ಏನೆಲ್ಲಾ ಇರಬೇಕೆಂದು ಈ ಮನುಷ್ಯರಿಗೆ ಹೇಳಿದನು. ಪತ್ರ ಬರೆದ ತಕ್ಷಣ ಆ ಪತ್ರ ಬರೆದವರದ್ದಾಗಲ್ಲ, ಯಾರು ಬರೆಸಿದರೋ ಅವರದ್ದೇ ಆಗಿರುತ್ತದೆ.

ಕೆಲವು ಬರಹಗಾರರಿಗೆ ದೇವರು ತನ್ನ ಸಂದೇಶವನ್ನು ದೇವದೂತರ ಮೂಲಕ ತಿಳಿಸಿದನು. ಇನ್ನು ಕೆಲವರಿಗೆ ದರ್ಶನಗಳನ್ನು ತೋರಿಸಿದನು. ಬೇರೆ ಕೆಲವರಿಗೆ ಕನಸಿನಲ್ಲಿ ದೇವರು ತನ್ನ ಸಂದೇಶವನ್ನು ಹೇಳಿದನು. ಆದರೆ, ಕೆಲವೊಮ್ಮೆ ಬರಹಗಾರರು ತಮ್ಮ ಸ್ವಂತ ಮಾತಿನಲ್ಲಿ ಬರೆಯಲು ದೇವರು ಅನುಮತಿಸಿದನು. ಇನ್ನು ಕೆಲವೊಮ್ಮೆ ನಿರ್ದಿಷ್ಟವಾಗಿ ಏನು ಬರೆಯಬೇಕೆಂದು ದೇವರೇ ಹೇಳಿದನು. ಅವರಿಗೆ ವಿಷಯ ಹೇಗೇ ಸಿಕ್ಕಿರಲಿ ಅವರಂತೂ ದೇವರ ಆಲೋಚನೆಗಳನ್ನೇ ಬರೆದರು, ಸ್ವಂತ ಯೋಚನೆಗಳನ್ನಲ್ಲ.

ಬೈಬಲನ್ನು ಬರೆಯಲು ಬರಹಗಾರರನ್ನು ಪ್ರೇರಿಸಿದ್ದು ದೇವರೇ ಎಂದು ಹೇಗೆ ನಂಬಬಹುದು? ಇದನ್ನು ನಂಬಲು 3 ಆಧಾರಗಳನ್ನು ನೋಡೋಣ, ಬನ್ನಿ.



# ಬೈಬಲನ್ನು ನಂಬಲು ಕಾರಣಗಳು




## ವೈಜ್ಞಾನಿಕ ನಿಷ್ಕೃಷ್ಟತೆ

ಬೈಬಲ್ ವಿಜ್ಞಾನದ ಪುಸ್ತಕವಲ್ಲದಿದ್ದರೂ ಪರಿಸರದ ಬಗ್ಗೆ ಅದು ಹೇಳುವ ಮಾಹಿತಿ ವೈಜ್ಞಾನಿಕವಾಗಿ ನಿಷ್ಕೃಷ್ಟವಾಗಿದೆ. ಇಂತಹ ಎರಡು ಉದಾಹರಣೆಗಳನ್ನು ನೋಡೋಣ. 1. ವಾಯುಮಂಡಲ ಅಧ್ಯಯನ 2. ವಂಶವಾಹಿ ಅಧ್ಯಯನ

### ವಾಯುಮಂಡಲ ಅಧ್ಯಯನ—ಮಳೆ ಉಂಟಾಗುವ ವಿಧ

ದೇವರು 'ನೀರಿನ ಹನಿಗಳನ್ನು ಎಳೆದುಕೊಳ್ಳುವನು, ಅವು ತಿಳಿಮಳೆಯಾಗಿ ಮಂಜಿನಿಂದ ಉದುರುವವು. ಮೋಡಗಳು ಅದನ್ನು ಸುರಿಸಿ ಬಹುಜನರ ಮೇಲೆ ಚಿಮಕಿಸುವವು' ಎನ್ನುತ್ತದೆ ಬೈಬಲ್.—ಯೋಬ 36:27, 28.

ಬೈಬಲಿನ ಈ ವಚನದಲ್ಲಿ ಜಲಚಕ್ರದಲ್ಲಿರುವ ಮೂರು ಮುಖ್ಯ ಹೆಜ್ಜೆಗಳನ್ನು ತಿಳಿಸಲಾಗಿದೆ. ಅವು (1) ಆವಿಯಾಗುವಿಕೆ, (2) ಘನೀಕರಣ, (3) ಮಳೆ ಅಥವಾ ಹಿಮ. ಮೊದಲು, ಸೂರ್ಯನ ಶಾಖದ ಮೂಲನಾಗಿರುವ ದೇವರು ಆ ಶಾಖದಿಂದ "ನೀರಿನ ಹನಿಗಳನ್ನು ಎಳೆದುಕೊಳ್ಳುವನು." ಇದನ್ನು **ಆವಿಯಾಗುವಿಕೆ** ಎನ್ನುತ್ತಾರೆ. ನಂತರ ಆ ಆವಿ **ಘನೀಕರಣಗೊಂಡು** ಮೋಡವಾಗುತ್ತದೆ. ಆಮೇಲೆ ಆ ಮೋಡ ಕರಗಿ **ಮಳೆ ಅಥವಾ ಹಿಮವಾಗಿ** ಬೀಳುತ್ತದೆ. ಈ ಮಳೆ ಹೇಗೆ ಉಂಟಾಗುತ್ತದೆ ಎಂಬ ಸಂಪೂರ್ಣ ಮಾಹಿತಿ ತಜ್ಞರಿಗೆ ಇನ್ನೂ ತಿಳಿದಿಲ್ಲ. ಆದಕ್ಕೆ ಬೈಬಲ್, 'ಮೋಡಗಳ ಹಬ್ಬುಗೆಯನ್ನೂ . . . ಯಾವನೂ ಅರ್ಥಮಾಡಿಕೊಳ್ಳಲಾರನು' ಎನ್ನುತ್ತದೆ. (ಯೋಬ 36:29) ಆದರೆ, ಸೃಷ್ಟಿಕರ್ತನಿಗೆ ಜಲಚಕ್ರದ ಬಗ್ಗೆ ಎಲ್ಲವೂ ತಿಳಿದಿದೆ. ಆದ್ದರಿಂದಲೇ ಬೈಬಲ್ ಬರಹಗಾರರು ಅದರ ಬಗ್ಗೆ ನಿಷ್ಕೃಷ್ಟವಾಗಿ ಬರೆಯಲು ಸಾಧ್ಯವಾಗಿದೆ. ಅಷ್ಟೇ ಅಲ್ಲದೆ, ಈ ಪ್ರಕ್ರಿಯೆಯ ಬಗ್ಗೆ ಮನುಷ್ಯರು ತಿಳಿದುಕೊಳ್ಳುವುದಕ್ಕಿಂತ ನೂರಾರು ವರ್ಷಗಳ ಮುಂಚೆಯೇ ದೇವರು ಬೈಬಲಿನಲ್ಲಿ ತಿಳಿಸಿದ್ದಾನೆ.

### ವಂಶವಾಹಿ ಅಧ್ಯಯನ—ಮಾನವ ಭ್ರೂಣದ ಬೆಳವಣಿಗೆ

'ನಾನು ಇನ್ನೂ ಕೇವಲ ಭ್ರೂಣವಾಗಿರುವಾಗಲೇ ನಿನ್ನ ಕಣ್ಣುಗಳು ನನ್ನನ್ನು ನೋಡಿದವು; **ಅದರ ಎಲ್ಲಾ ಭಾಗಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟಿದ್ದವು'** ಎಂದು ರಾಜ ದಾವೀದನು ದೇವರಿಗೆ ಹೇಳಿದನು. (ಕೀರ್ತನೆ 139:16) ಭ್ರೂಣವು ಹೇಗೆ ಬೆಳೆಯಬೇಕೆಂದು ಮೊದಲೇ ಒಂದು "ಪುಸ್ತಕದಲ್ಲಿ" ಬರೆಯಲಾಗಿರುತ್ತದೆ ಮತ್ತು ಅದರ ಪ್ರಕಾರ ಭ್ರೂಣ ಬೆಳೆಯುತ್ತದೆ ಎಂದು ದಾವೀದನು ಕಾವ್ಯಾತ್ಮಕವಾಗಿ ಬರೆದನು. ನಿಮಗೆ ಗೊತ್ತಾ? ಅವನಿದನ್ನು 3,000 ವರ್ಷಗಳ ಹಿಂದೆ ಬರೆದನು!

ಆಸ್ಟ್ರಿಯಾದ ಸಸ್ಯ ಶಾಸ್ತ್ರಜ್ಞರಾದ ಗ್ರೆಗರ್ ಮೆಂಡಲ್ 1800ರಲ್ಲಿ ವಂಶವಾಹಿಗಳ ಮೂಲಭೂತ ತತ್ವಗಳನ್ನು ಕಂಡುಹಿಡಿದರು. ಅಲ್ಲಿಯವರೆಗೆ ಇದರ ಬಗ್ಗೆ ಜನರಿಗೆ ತಿಳಿದಿರಲಿಲ್ಲ. ನಂತರ 2003ರ ಏಪ್ರಿಲ್ ತಿಂಗಳಿನಲ್ಲಿ ಸಂಶೋಧಕರು ಮಾನವ ಜೀನೋಮ್ (ಜೀನು ಸಮುದಾಯ) ರಚನೆಯನ್ನು ಕಂಡುಹಿಡಿದರು. ಇದರಲ್ಲಿ ಮಾನವ ದೇಹ ಪೂರ್ಣವಾಗಿ ಬೆಳೆಯಲು ಬೇಕಾದ ಎಲ್ಲ ಮಾಹಿತಿ ಇರುತ್ತದೆ. ಈ ವಂಶವಾಹಿ ರಾಸಾಯನಿಕ ಕೋಡ್ ಅನ್ನು ವಿಜ್ಞಾನಿಗಳು ಅಕ್ಷರಗಳಿಂದ ರಚಿತವಾದ ಪದಗಳಿಂದ ತುಂಬಿದ ಶಬ್ದಕೋಶಕ್ಕೆ ಹೋಲಿಸುತ್ತಾರೆ. ಈ ಪದಗಳು ವಂಶವಾಹಿ ನಿರ್ದೇಶನಗಳನ್ನು ಹೊಂದಿರುತ್ತವೆ. ಈ ನಿರ್ದೇಶನಗಳ ಆಧಾರದ ಮೇಲೆ ಭ್ರೂಣದ ಮೆದುಳು, ಹೃದಯ, ಶ್ವಾಸಕೋಶ ಮತ್ತು ಕಾಲುಗಳಂತಹ ಅಂಗಗಳು ಸೂಕ್ತವಾದ ರೀತಿಯಲ್ಲಿ ಮತ್ತು ಸರಿಯಾದ ಸಮಯಕ್ಕೆ ಬೆಳೆಯುತ್ತವೆ. ಆದ್ದರಿಂದಲೇ, ಜೀನೋಮನ್ನು ವಿಜ್ಞಾನಿಗಳು "ಜೀವದ ಪುಸ್ತಕ" ಎಂದು ಕರೆಯುತ್ತಾರೆ. ಬೈಬಲಿನ ಬರಹಗಾರ ದಾವೀದ ಇದರ ಬಗ್ಗೆ ಇಷ್ಟು ನಿಷ್ಕೃಷ್ಟವಾಗಿ ಹೇಗೆ ಬರೆದ? 'ಯೆಹೋವ ದೇವರ ಆತ್ಮವು ನನ್ನಲ್ಲಿ ಬಂತು; ಆತನ ವಾಕ್ಯವು ನನ್ನ ಬಾಯಲ್ಲಿತ್ತು' ಎಂದು ಅವನೇ ಹೇಳಿದನು.*—2 ಸಮುವೇಲ 23:2.

* ಯೆಹೋವ ಎನ್ನುವುದು ದೇವರ ವೈಯಕ್ತಿಕ ಹೆಸರು ಎಂದು ಬೈಬಲಿನಲ್ಲಿ ತಿಳಿಸಲಾಗಿದೆ.—ಕೀರ್ತನೆ 83:18.




# ಭವಿಷ್ಯದ ನಿಷ್ಕೃಷ್ಟ ಮಾಹಿತಿ

ರಾಜರು ಮತ್ತು ರಾಜ್ಯಗಳು ಎಲ್ಲಿ, ಹೇಗೆ, ಯಾವಾಗ ತಲೆ ಎತ್ತುತ್ತವೆ ಮತ್ತು ಯಾವಾಗ ಪತನವಾಗುತ್ತವೆ ಎಂದು ಹೇಳುವುದು ಅಸಾಧ್ಯ. ಆದರೆ ಬೈಬಲ್, ಇತಿಹಾಸದಲ್ಲಿ ಮೆರೆದ ದೊಡ್ಡ ದೊಡ್ಡ ಪಟ್ಟಣಗಳು ಮತ್ತು ಸಾಮ್ರಾಜ್ಯಗಳ ಪತನದ ಬಗ್ಗೆ ಸವಿವರವಾಗಿ ಭವಿಷ್ಯ ನುಡಿದಿತ್ತು. ಅಂತಹ ಎರಡು ಉದಾಹರಣೆಗಳನ್ನು ನೋಡಿ.

## ಬಾಬೆಲ್ ಸಾಮ್ರಾಜ್ಯದ ಪತನ

ನೂರಾರು ವರ್ಷಗಳವರೆಗೆ ಪಶ್ಚಿಮ ಏಷ್ಯಾದಲ್ಲಿ ತನ್ನ ಪರಾಕ್ರಮವನ್ನು ತೋರಿದ ಸಾಮ್ರಾಜ್ಯ ಪುರಾತನ ಬಾಬೆಲ್. ಆ ಕಾಲದಲ್ಲಿ ಅದು ಪ್ರಪಂಚದಲ್ಲೇ ಅತೀ ದೊಡ್ಡ ನಗರವಾಗಿತ್ತು. ಆದರೆ, 200 ವರ್ಷಗಳ ಮುಂಚೆಯೇ ಯೆಶಾಯ ಎಂಬ ಬೈಬಲಿನ ಬರಹಗಾರ, ಕೋರೆಷ ಎಂಬ ರಾಜ ಈ ಸಾಮ್ರಾಜ್ಯವನ್ನು ನಿರ್ನಾಮ ಮಾಡುವನು, ನಂತರ ಅದರಲ್ಲಿ ಜನ ವಾಸಿಸುವುದೇ ಇಲ್ಲ ಎಂದು ಮುಂತಿಳಿಸಿದನು. (ಯೆಶಾಯ 13:17-20; 44:27, 28; 45:1, 2) ಆದರೆ ಇದೆಲ್ಲಾ ನಿಜವಾಗಿ ನಡೀತಾ?

ಕ್ರಿ.ಪೂ. 539, ಅಕ್ಟೋಬರ್ ತಿಂಗಳ ಒಂದು ರಾತ್ರಿ ರಾಜ ಕೋರೆಷ ಬಾಬೆಲನ್ನು ಆಕ್ರಮಣ ಮಾಡಿದನು. ಇಷ್ಟು ದಿನ ಬಾಬೆಲ್ ಸಾಮ್ರಾಜ್ಯ ಹಚ್ಚ ಹಸಿರಾಗಿರಲು ಕಾರಣವಾಗಿದ್ದ ನೀರಿನ ಕಾಲುವೆಗಳು ಸಮಯಾನಂತರ ಬತ್ತಿ ಹೋದವು. ಕ್ರಿ.ಶ. 200ರಷ್ಟಕ್ಕೆ ಆ ಪ್ರದೇಶ ಹಾಳು ದಿಬ್ಬವಾಗಿ ಹೋಗಿತ್ತು. ಇವತ್ತಿಗೂ ಈ ಬಾಬೆಲ್ ಪ್ರದೇಶ ಹಾಳು ದಿಬ್ಬವಾಗಿಯೇ ಉಳಿದಿದೆ. ಬೈಬಲ್ ಮೊದಲೇ ಹೇಳಿದಂತೆ ಬಾಬೆಲ್ ಸಾಮ್ರಾಜ್ಯ 'ನಿರ್ಜನವಾಗಿ ತೀರಾ ಹಾಳಾಗಿ ಹೋಯಿತು.'—ಯೆರೆಮೀಯ 50:13.

ಆ ಬೈಬಲ್ ಬರಹಗಾರನಾದ ಯೆಶಾಯ ಇಷ್ಟು ನಿಷ್ಕೃಷ್ಟವಾಗಿ ಭವಿಷ್ಯವನ್ನು ಹೇಗೆ ಹೇಳಿದನು? ಇದು 'ಆಮೋಚನ ಮಗನಾದ ಯೆಶಾಯನಿಗೆ ಬಾಬೆಲಿನ ವಿಷಯವಾಗಿ ತಿಳಿದು ಬಂದ ದೇವರ ವಾಕ್ಯ' ಎಂದು ಬೈಬಲ್ ಹೇಳುತ್ತದೆ. —ಯೆಶಾಯ 13:1.

## ನಿನೆವೆ 'ಮರುಭೂಮಿಯಂತೆ ಒಣಗಿ ಹೋಗುವುದು'

ವೈಭವಯುತ ಅಶ್ಶೂರ ಸಾಮ್ರಾಜ್ಯದ ರಾಜಧಾನಿಯಾದ ನಿನೆವೆಯು, ವಾಸ್ತುಶಿಲ್ಪಕ್ಕೆ ಹೆಸರುವಾಸಿ ಆಗಿತ್ತು. ಅಗಲವಾದ ರಸ್ತೆಗಳು, ಉದ್ಯಾನವನಗಳು, ದೇವಾಲಯಗಳು ಮತ್ತು ಬೃಹದಾಕಾರದ ಅರಮನೆಗಳಿಂದ ಆ ರಾಜಧಾನಿ ವಿಜೃಂಭಿಸುತ್ತಿತ್ತು. ಆದರೆ, ಇಂಥ ಅಮೋಘ ಪಟ್ಟಣವಾದ 'ನಿನೆವೆ ಹಾಳಾಗಿ ಮರುಭೂಮಿಯಂತೆ ಒಣಗಿ ಹೋಗುವುದು' ಎಂದು ದೇವರ ಸೇವಕ ಚೆಫನ್ಯ ಮುಂತಿಳಿಸಿದ್ದನು. —ಚೆಫನ್ಯ 2:13-15.

ಕ್ರಿ.ಪೂ. 7ನೇ ಶತಮಾನದಲ್ಲಿ ಬಾಬೆಲ್ ಮತ್ತು ಮೇದ್ಯಯರು ಜೊತೆಗೂಡಿ ಆಕ್ರಮಣ ಮಾಡಿದಾಗ ನಿನೆವೆ ಸಂಪೂರ್ಣವಾಗಿ ನಿರ್ನಾಮವಾಯಿತು. ಹೀಗೆ ಸೋತು ಸುಣ್ಣವಾದ ಈ ಪಟ್ಟಣ ಸುಮಾರು 2,500 ವರ್ಷಗಳವರೆಗೆ ಹೇಳ ಹೆಸರಿಲ್ಲದಂತೆ ಆಯಿತು. ಆದ್ದರಿಂದ, ನಿನೆವೆ ಅನ್ನುವ ಪಟ್ಟಣ ನಿಜವಾಗಿಯೂ ಇತ್ತಾ ಎಂದು ಜನರು ಸಂಶಯ ಪಡುತ್ತಿದ್ದರು! ಇತ್ತೀಚೆಗೆ ಅಂದರೆ, 19ನೇ ಶತಮಾನದ ಮಧ್ಯಭಾಗದಲ್ಲಿ ಕೆಲವು ಪ್ರಾಕ್ತನಶಾಸ್ತ್ರಜ್ಞರು ಹಾಳಾದ ನಿನೆವೆಯನ್ನು ಕಂಡುಹಿಡಿದರು. ಈ ಪಟ್ಟಣ ಎಷ್ಟು ನಿರ್ನಾಮವಾಗಿದೆ ಅಂದರೆ 'ಮತ್ತೆ ಈ ನಿನೆವೆ ಪಟ್ಟಣವನ್ನು ಗುರುತಿಸಲು ಆಗದೇ ಹೋಗಬಹುದು' ಎಂದು ಗ್ಲೋಬಲ್ ಹೆರಿಟೇಜ್ ಫಂಡ್ ಎಂಬ ಸಂಸ್ಥೆ ಎಚ್ಚರಿಸಿದೆ.

ಚೆಫನ್ಯನಿಗೆ ಈ ಮಾಹಿತಿ ಮೊದಲೇ ಹೇಗೆ ತಿಳಿಯಿತು? ಇದು 'ಯೆಹೋವ ದೇವರು ದಯಪಾಲಿಸಿದ ವಾಕ್ಯ' ಎಂದು ಅವನೇ ಹೇಳಿದನು.—ಚೆಫನ್ಯ 1:1.



# ಜೀವನದ ಪ್ರಾಮುಖ್ಯ ಪ್ರಶ್ನೆಗಳಿಗೆ ಉತ್ತರ

ಜೀವನದ ಪ್ರಾಮುಖ್ಯ ಪ್ರಶ್ನೆಗಳಿಗೆ ಬೈಬಲ್ ಸರಿಯಾದ ಉತ್ತರ ಕೊಡುತ್ತದೆ. ಮುಂದಿನ ಉದಾಹರಣೆಗಳನ್ನು ಪರಿಗಣಿಸಿ.

## ಲೋಕದಲ್ಲಿ ಯಾಕೆ ಇಷ್ಟು ಕಷ್ಟ, ಅನ್ಯಾಯ ಇದೆ?

ಕಷ್ಟ ಮತ್ತು ಅನ್ಯಾಯದ ಬಗ್ಗೆ ಬೈಬಲ್ ಬಹಳಷ್ಟು ಮಾಹಿತಿ ಕೊಡುತ್ತದೆ. ಬೈಬಲ್ ತಿಳಿಸುವ ಉತ್ತರ ಹೀಗಿದೆ:

1. **‘ಒಬ್ಬನು ಮತ್ತೊಬ್ಬನ ಮೇಲೆ ಅಧಿಕಾರ ನಡಿಸಿ ಅವನಿಗೆ ಹಾನಿಯನ್ನು ಮಾಡಿದ್ದಾನೆ.’**—ಪ್ರಸಂಗಿ 8:9.

   ಯೋಗ್ಯರಲ್ಲದ ಮತ್ತು ಮೋಸ ಮಾಡುವ ಜನ ಅಧಿಕಾರ ನಡೆಸುವುದರಿಂದ ಹೇಳಲಾಗದಷ್ಟು ಕಷ್ಟಗಳು ಬಂದಿವೆ.

2. **“ಕಾಲವೂ ಪ್ರಾಪ್ತಿಯೂ ಯಾರಿಗೂ ತಪ್ಪಿದ್ದಲ್ಲ.”** —ಪ್ರಸಂಗಿ 9:11.

   ಗಂಭೀರ ಕಾಯಿಲೆಗಳು, ಅಪಘಾತಗಳು ಮತ್ತು ವಿಪತ್ತುಗಳಂಥ ಅನಿರೀಕ್ಷಿತ ಘಟನೆಗಳು ಯಾವಾಗಾದರೂ, ಎಲ್ಲಿಯಾದರೂ, ಯಾರಿಗಾದರೂ ಸಂಭವಿಸಬಹುದು.

3. **“ಒಬ್ಬ ಮನುಷ್ಯನಿಂದ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಪ್ರವೇಶಿಸಿದಂತೆಯೇ, ಎಲ್ಲರೂ ಪಾಪಮಾಡಿದ್ದರಿಂದ ಮರಣವು ಎಲ್ಲರಲ್ಲಿಯೂ ವ್ಯಾಪಿಸಿತು.”**—ರೋಮನ್ನರಿಗೆ 5:12.

   ಮೊದಲ ಮಾನವರಾದ ಆದಾಮ ಮತ್ತು ಹವ್ವರನ್ನು ಸೃಷ್ಟಿ ಮಾಡಿದಾಗ ಅಪರಿಪೂರ್ಣತೆ ಮತ್ತು ಸಾವು ಇರಲಿಲ್ಲ. ದೇವರ ಮಾತನ್ನು ಗೊತ್ತಿದ್ದೂ ಗೊತ್ತಿದ್ದೂ ಮೀರಿದ್ದರಿಂದ, ಪಾಪ “ಲೋಕದೊಳಗೆ ಪ್ರವೇಶಿಸಿತು.”

ಬೈಬಲ್, ಮನುಷ್ಯರಿಗೆ ಯಾಕೆ ಕಷ್ಟ ಇದೆ ಅಂತ ಮಾತ್ರ ಹೇಳುವುದಿಲ್ಲ. ದೇವರು ಅದನ್ನು ಹೇಗೆ ತೆಗೆದು ಹಾಕುತ್ತಾನೆ ಅಂತನೂ ಹೇಳುತ್ತೆ. ಅದಕ್ಕೆ ಬೈಬಲಿನಲ್ಲಿ, ‘ದೇವರು ಜನರ ಕಣ್ಣೀರನ್ನೆಲ್ಲಾ ಒರಸಿಬಿಡುವನು; ಇನ್ನು ಮರಣವಿರುವುದಿಲ್ಲ; ಇನ್ನು ದುಃಖವಾಗಲಿ ಗೋಳಾಟವಾಗಲಿ ನೋವಾಗಲಿ ಇರುವುದಿಲ್ಲ’ ಎಂಬ ಆಶ್ವಾಸನೆಯನ್ನು ಕೊಡಲಾಗಿದೆ. —ಪ್ರಕಟನೆ 21:3, 4.

## ಸತ್ತಾಗ ಏನಾಗುತ್ತದೆ?

ಸಾವು ಅನ್ನೋದು ಪ್ರಜ್ಞೆಯಿಲ್ಲದ, ಸಂಪೂರ್ಣ ನಿಷ್ಕ್ರಿಯ ಸ್ಥಿತಿ ಎಂದು ಬೈಬಲ್ ವಿವರಿಸುತ್ತದೆ. “ಜೀವಿತರಿಗೆ ಸಾಯುತ್ತೇವೆಂಬ ತಿಳುವಳಿಕೆಯು ಉಂಟಷ್ಟೆ; ಸತ್ತವರಿಗೋ ಯಾವ ತಿಳುವಳಿಕೆಯೂ ಇಲ್ಲ” ಎಂದು ಪ್ರಸಂಗಿ 9:5 ಹೇಳುತ್ತದೆ. ಸತ್ತಾಗ ನಮ್ಮ ‘ಸಂಕಲ್ಪಗಳೆಲ್ಲಾ ಹಾಳಾಗುತ್ತವೆ.’ (ಕೀರ್ತನೆ 146:4) ಅಂದರೆ ಮೆದುಳು, ಜ್ಞಾನೇಂದ್ರಿಗಳು, ಹೀಗೆ ಎಲ್ಲ ಅಂಗಗಳು ಕೆಲಸ ಮಾಡುವುದನ್ನು ನಿಲ್ಲಿಸುತ್ತವೆ. ಆದ್ದರಿಂದಲೇ ಸತ್ತವರು ನಡೆಯಲು, ಯೋಚಿಸಲು, ಮಾತಾಡಲು ಹೀಗೆ ಏನು ಮಾಡಲೂ ಸಾಧ್ಯವಿಲ್ಲ.

ಆದರೆ ಬೈಬಲ್ ಕೇವಲ ಸತ್ತ ಸ್ಥಿತಿಯನ್ನು ಹೇಳಿ ಸುಮ್ಮನಾಗುವುದಿಲ್ಲ. ದೇವರು ಸತ್ತವರನ್ನು ಮತ್ತೆ ಜೀವಂತವಾಗಿ ಎಬ್ಬಿಸುತ್ತಾನೆ ಎಂದು ಹೇಳುತ್ತದೆ. ಇದನ್ನೇ ಪುನರುತ್ಥಾನ ಎಂದು ಕರೆಯಲಾಗಿದೆ.—ಹೋಶೇಯ 13:14; ಯೋಹಾನ 11:11-14.

## ಜೀವನದ ಉದ್ದೇಶವೇನು?

ಬೈಬಲಿನ ಪ್ರಕಾರ ಯೆಹೋವ ದೇವರು ಮೊದಲ ಗಂಡು-ಹೆಣ್ಣನ್ನು ಸೃಷ್ಟಿಸಿದನು. (ಆದಿಕಾಂಡ 1:27) ಆದಕ್ಕೇ, ಮೊದಲ ಮಾನವ ಆದಾಮನನ್ನು ‘ದೇವರ ಮಗ’ ಎಂದು ಕರೆಯಲಾಗಿದೆ. (ಲೂಕ 3:38) ಮನುಷ್ಯರನ್ನು ದೇವರು ಒಂದು ಉದ್ದೇಶದಿಂದ ಸೃಷ್ಟಿ



ಸಿದ್ದಾನೆ. ಅದೇನೆಂದರೆ, ಅವರು ತನ್ನೊಂದಿಗೆ ಆಪ್ತ ಸ್ನೇಹ ಬೆಳೆಸಿಕೊಳ್ಳಬೇಕು, ಮಕ್ಕಳನ್ನು ಪಡೆದು ಸಂತೋಷವಾಗಿ ಭೂಮಿಯ ಮೇಲೆ ಸದಾಕಾಲ ಇರಬೇಕು ಎಂದಾಗಿದೆ. ಅದಕ್ಕಾಗಿಯೇ ದೇವರು ಎಲ್ಲ ಮನುಷ್ಯರಿಗೆ ಆಧ್ಯಾತ್ಮಿಕ ಬಯಕೆಯನ್ನು ಇಟ್ಟಿದ್ದಾನೆ. ಈ ಬಯಕೆ ದೇವರ ಬಗ್ಗೆ ತಿಳಿಯಬೇಕೆಂಬ ಆಸೆಯಾಗಿದೆ. ಆದ್ದರಿಂದಲೇ ಬೈಬಲ್, "ತಮ್ಮ ಆಧ್ಯಾತ್ಮಿಕ ಅಗತ್ಯದ ಪ್ರಜ್ಞೆಯುಳ್ಳವರು ಸಂತೋಷಿತರು" ಎಂದು ಹೇಳುತ್ತದೆ.—ಮತ್ತಾಯ 5:3.

ಅಷ್ಟೇ ಅಲ್ಲದೆ, "ದೇವರ ವಾಕ್ಯವನ್ನು ಕೇಳಿಸಿಕೊಳ್ಳುತ್ತಿದ್ದು ಅದರಂತೆ ನಡೆಯುತ್ತಿರುವವರೇ ಸಂತೋಷಿತರು" ಎಂದು ಬೈಬಲ್ ಹೇಳುತ್ತದೆ. (ಲೂಕ 11:28) ಬೈಬಲ್ ನಮಗೆ ದೇವರ ಬಗ್ಗೆ ಕಲಿಸುತ್ತದೆ ಮಾತ್ರವಲ್ಲ, ಈಗಲೂ ನಾವು ಸಂತೋಷದ ಜೀವನ ಸಾಗಿಸಲು ಸಹಾಯ ಮಾಡುತ್ತದೆ. ಜೊತೆಗೆ, ಮುಂದೆ ಶಾಶ್ವತವಾಗಿ ಜೀವಿಸುವ ನಿರೀಕ್ಷೆ ಕೊಡುತ್ತದೆ.

## ಬೈಬಲ್—ದೇವರು ನಮಗೆ ಬರೆದ ಪತ್ರ

ಆಧಾರಗಳನ್ನು ಪರೀಕ್ಷಿಸಿದ ನಂತರ, ಬೈಬಲ್ ಕೇವಲ ಹಳೇ ಕಾಲದ ಪುಸ್ತಕವಲ್ಲ, ಅದು ಒಂದು ವಿಶೇಷ ಪುಸ್ತಕ ಎಂದು ಲಕ್ಷಾಂತರ ಜನರು ತಿಳಿದುಕೊಂಡಿದ್ದಾರೆ. ಬೈಬಲ್ ದೇವರಿಂದ ಪ್ರೇರಿತವಾಗಿದೆ, ಇದರ ಮೂಲಕ ನಿಮ್ಮ ಜೊತೆ ಮತ್ತು ಇಡೀ ಮಾನವಕುಲದ ಜೊತೆ ದೇವರು ಮಾತಾಡುತ್ತಾನೆ ಎಂದು ಅವರಿಗೆ ಮನದಟ್ಟಾಗಿದೆ. ದೇವರ ಬಗ್ಗೆ ತಿಳಿದುಕೊಳ್ಳಲು ಮತ್ತು ಸ್ನೇಹಿತರಾಗಲು ಆತನು ಇದರಲ್ಲಿ ಕರೆ ನೀಡಿದ್ದಾನೆ. "ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು" ಎಂದು ಬೈಬಲ್ ಮಾತು ಕೊಡುತ್ತದೆ.—ಯಾಕೋಬ 4:8.

ಬೈಬಲ್ ಬಗ್ಗೆ ತಿಳಿದುಕೊಳ್ಳುವಾಗ ರೋಮಾಂಚಕ ನಿರೀಕ್ಷೆ ನಿಮಗೆ ಸಿಗುತ್ತದೆ. ಯಾವುದೇ ಒಂದು ಪುಸ್ತಕ ಓದಿದಾಗ ಅದರಲ್ಲಿ ಅದರ ಲೇಖಕನ ಬಗ್ಗೆ ಸ್ವಲ್ಪ ಮಾಹಿತಿ ಗೊತ್ತಾಗುತ್ತದೆ. ಅದೇರೀತಿ, ಬೈಬಲನ್ನು ಓದುವಾಗ ಅದರ ಗ್ರಂಥಕರ್ತನಾದ ದೇವರ ಭಾವನೆಗಳ ಮತ್ತು ಆತನ ಯೋಚನೆಗಳ ಬಗ್ಗೆ ತಿಳಿಯುತ್ತದೆ. ಇದರಿಂದ ನಿಮಗೇನು ಪ್ರಯೋಜನ? ನಿಮ್ಮ ಸೃಷ್ಟಿಕರ್ತನ ಮನದಾಳದ ಮಾತುಗಳು ಮತ್ತು ಭಾವನೆಗಳ ಬಗ್ಗೆ ನೀವು ತಿಳಿದುಕೊಳ್ಳಬಹುದು. ಅಷ್ಟೇ ಅಲ್ಲ,

- ▶ ದೇವರ ಹೆಸರೇನು, ಆತನ ಸ್ವಭಾವ ಮತ್ತು ಗುಣಗಳು ಯಾವುವು?
- ▶ ಮಾನವರ ಬಗ್ಗೆ ದೇವರ ಉದ್ದೇಶವೇನು?
- ▶ ದೇವರೊಟ್ಟಿಗೆ ಹೇಗೆ ಸ್ನೇಹವನ್ನು ಬೆಳೆಸಿಕೊಳ್ಳಬಹುದು? ಎಂದು ತಿಳಿದುಕೊಳ್ಳಬಹುದು.

ಇದರ ಬಗ್ಗೆ ಹೆಚ್ಚನ್ನು ಕಲಿಯಲು ನಿಮಗೆ ಇಷ್ಟವಿದೆಯಾ? ಹಾಗಾದರೆ, ಯೆಹೋವನ ಸಾಕ್ಷಿಗಳು ನಿಮಗೆ ಸಹಾಯ ಮಾಡಲು ಇಷ್ಟಪಡುತ್ತಾರೆ. ನೀವು ಉಚಿತವಾಗಿ ಬೈಬಲ್ ಬಗ್ಗೆ ಕಲಿಯಲು ಏರ್ಪಾಡನ್ನು ಮಾಡುತ್ತಾರೆ. ಇದು ಬೈಬಲಿನ ಗ್ರಂಥಕರ್ತನಾದ ಯೆಹೋವ ದೇವರಿಗೆ ಹೆಚ್ಚು ಹತ್ತಿರವಾಗಲು ನಿಮಗೆ ಸಹಾಯ ಮಾಡುತ್ತದೆ. ■

ಈ ಲೇಖನದಲ್ಲಿ ಬೈಬಲ್ ದೇವರಿಂದ ಪ್ರೇರಿತವಾದ ಪುಸ್ತಕ ಎಂದು ಹೇಳಲು ಕೆಲವು ಆಧಾರಗಳನ್ನು ಚರ್ಚಿಸಲಾಯಿತು. ಇದರ ಕುರಿತು ಹೆಚ್ಚಿನ ಮಾಹಿತಿಗಾಗಿ ಯೆಹೋವನ ಸಾಕ್ಷಿಗಳು ಪ್ರಕಾಶಿಸಿರುವ *ಬೈಬಲ್ ನಿಜವಾಗಿಯೂ ಏನನ್ನು ಬೋಧಿಸುತ್ತದೆ?* ಪುಸ್ತಕದ 2 ನೇ ಅಧ್ಯಾಯ ನೋಡಿ. ಇದು www.jw.org/knನಲ್ಲಿ ಲಭ್ಯ ಅಥವಾ ಈ ಕೋಡನ್ನು ಸ್ಕ್ಯಾನ್ ಮಾಡಿ

*ಬೈಬಲನ್ನು ಯಾರು ಬರೆಸಿದರು?* ಎಂಬ ವಿಡಿಯೋ ಸಹ ನೋಡಿ. ಇದು www.jw.org/knನಲ್ಲಿ ಲಭ್ಯ

ಪ್ರಕಾಶನಗಳು > ವಿಡಿಯೊಗಳು ನೋಡಿ

# ಮಕ್ಕಳಿಗೆ ಕೆಲಸ ಕೊಡಬೇಕಾ?



## ಸಮಸ್ಯೆ

ಮನೆಯ ಕೆಲಸದಲ್ಲಿ ಮಕ್ಕಳೂ ಕೈ ಜೋಡಿಸಬೇಕು ಅಂತ ಕೆಲವು ಮನೆಗಳಲ್ಲಿ ಬಯಸುತ್ತಾರೆ. ಮಕ್ಕಳೂ ಅದನ್ನು ಯಾವುದೇ ಬೇಸರ ಇಲ್ಲದೆ ಮಾಡುತ್ತಾರೆ. ಇನ್ನು ಕೆಲವು ಮನೆಗಳಲ್ಲಿ, ಮಕ್ಕಳಿಗೆ ಯಾವ ಕೆಲಸನೂ ಕೊಡಲ್ಲ. ಆದ್ದರಿಂದ ಮಕ್ಕಳೂ ಖುಷಿಯಾಗಿ ಯಾವುದೇ ಕೆಲಸಕ್ಕೆ ಕೈಹಾಕುವುದಿಲ್ಲ.

ಅನೇಕ ದೇಶಗಳಲ್ಲಿ ಇಂಥ ಪರಿಸ್ಥಿತಿನೇ ಇದೆ. ಅಲ್ಲಿ ಮಕ್ಕಳು **ತೆಗೆದುಕೊಳ್ಳುತ್ತಾರೇ** ಹೊರತು **ಕೊಡೋದರ** ಬಗ್ಗೆ ಯೋಚಿಸುವುದೇ ಇಲ್ಲ. "ಈಗಿನ ಕಾಲದಲ್ಲಿ, ಹೆತ್ತವರು ಮಕ್ಕಳನ್ನು ವಿಡಿಯೋ ಗೇಮ್ ಆಡಲು, ಇಂಟರ್‌ನೆಟ್ ಮತ್ತು ಟಿ.ವಿ. ನೋಡಲು ಬಿಟ್ಟುಬಿಡುತ್ತಾರೆ. ಅವರಿಗೆ ಯಾವ ಕೆಲಸನೂ ಕೊಡಲ್ಲ" ಎಂದು ಸ್ಟೀವನ್ ಎಂಬ ಒಬ್ಬ ತಂದೆ ತಾನು ಗಮನಿಸಿದ್ದನ್ನು ಹೇಳುತ್ತಾನೆ.

ಮಕ್ಕಳಿಗೆ ಕೆಲಸ ಕೊಡುವುದರಿಂದ ಮನೆ ನೀಟಾಗಿ ಇಡಲು ಸಹಾಯ ಆಗುತ್ತೆ ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಕೆಲಸ ಕೊಡುವುದರಿಂದ ಮಕ್ಕಳ ಮಾನಸಿಕ ಬೆಳವಣಿಗೆಗೆ ಏನಾದ್ರೂ ಪ್ರಯೋಜನ ಆಗುತ್ತಾ? **ನಿಮಗೇನು** ಅನಿಸುತ್ತೆ?

## ನಿಮಗಿದು ತಿಳಿದಿರಲಿ

ಕೆಲವು ಹೆತ್ತವರು ಮಕ್ಕಳಿಗೆ ಕೆಲಸ ಕೊಡಲು ಹಿಂದೇಟು ಹಾಕುತ್ತಾರೆ. ಅದರಲ್ಲೂ ಮುಖ್ಯವಾಗಿ, ಮಕ್ಕಳಿಗೆ ತುಂಬ ಹೋಮ್‌ವರ್ಕ್ ಇದ್ದರೆ ಅಥವಾ ಆಟ ಮುಂತಾದ ಇತರ ಚಟುವಟಿಕೆಗಳಿದ್ದರೆ ಕೆಲಸನೇ ಕೊಡುವುದಿಲ್ಲ. ಆದರೆ, ಕೆಲಸ ಕೊಡುವುದರಿಂದ ಅನೇಕ ಪ್ರಯೋಜನಗಳಿವೆ. ಅವು:

**ಮಕ್ಕಳು ಜವಾಬ್ದಾರಿಯುತ ವ್ಯಕ್ತಿಗಳಾಗುತ್ತಾರೆ.** ಮನೆಯಲ್ಲಿ ಕೆಲಸ ಮಾಡುವ ಮಕ್ಕಳು ಶಾಲೆಯಲ್ಲೂ ಚುರುಕಾಗಿರುತ್ತಾರೆ. ಮನೆಯ ಕೆಲಸಗಳಲ್ಲಿ ಸಹಾಯ ಮಾಡುವುದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ, ಶಿಸ್ತು, ದೃಢ ಮನಸ್ಸು ಹೆಚ್ಚಾಗುತ್ತದೆ. ಈ ಗುಣಗಳು ಶಾಲೆಯ ಓದಿಗೆ ತುಂಬ ಸಹಾಯಕಾರಿ.

**ಮಕ್ಕಳಲ್ಲಿ ಇತರರಿಗೆ ಸಹಾಯ ಮಾಡುವ ಗುಣ ಬರುತ್ತದೆ.** ಸಾಮಾನ್ಯವಾಗಿ, ಮನೆಯ ಕೆಲಸದಲ್ಲಿ ಸಹಾಯ ಮಾಡುವ ಮಕ್ಕಳು ದೊಡ್ಡವರಾದಾಗ ತಮ್ಮ ಸಮಾಜಕ್ಕೂ ಸಹಾಯವಾಗುವ ಕೆಲಸ ಮಾಡಿದ್ದನ್ನು ಕೆಲವರು ಗಮನಿಸಿದ್ದಾರೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಯಾಕೆಂದರೆ, ಮನೆಯಲ್ಲಿ ಕೆಲಸ ಮಾಡುವಾಗ ಮಕ್ಕಳು ತಮ್ಮ ಸ್ವಂತ ವಿಷಯಗಳಿಗಿಂತ ಇತರರ ಅಗತ್ಯಗಳಿಗೆ ಪ್ರಾಮುಖ್ಯತೆ ಕೊಡಲು ಕಲಿಯುತ್ತಾರೆ. "ಮಕ್ಕಳಿಗೆ ಏನೂ ಕೆಲಸ ಕೊಡದಿದ್ದಾಗ 'ನನ್ನ ಕೆಲಸ ಮಾಡಲಿಕ್ಕೆ ಬೇರೆಯವರು ಇದ್ದಾರೆ' ಎಂಬ ಭಾವನೆ ಅವರಲ್ಲಿ ಬೆಳೆಯುತ್ತದೆ. ಅವರಿಗೆ ಜೀವನದ ಬಗ್ಗೆ ತಪ್ಪಾದ ಅಭಿಪ್ರಾಯ ಬರುತ್ತದೆ. ಜೀವನದಲ್ಲಿ ಅವರು ಜವಾಬ್ದಾರಿ ವಹಿಸಿಕೊಳ್ಳಬೇಕು ಮತ್ತು ಕಷ್ಟಪಟ್ಟು ಕೆಲಸ ಮಾಡಬೇಕು ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದಿಲ್ಲ" ಎಂದು ಮೇಲೆ ತಿಳಿಸಲಾದ ಸ್ಟೀವನ್ ಹೇಳುತ್ತಾರೆ.

**ಕುಟುಂಬ ಒಗ್ಗಟ್ಟಾಗಿರುತ್ತದೆ.** ಮನೆಯಲ್ಲಿ ಕೆಲಸ ಮಾಡುವುದರಿಂದ ಕುಟುಂಬದಲ್ಲಿ ತಮಗೆ ಒಂದು ಸ್ಥಾನದ ಜೊತೆ ಜವಾಬ್ದಾರಿಯೂ ಇದೆ ಎಂದು ಮಕ್ಕಳಿಗೆ ಗೊತ್ತಾಗುತ್ತದೆ. ಹೆತ್ತವರು ಮನೆಯ ಕೆಲಸಗಳಿಗಿಂತ ಆಟ ಮುಂತಾದ ಇತರ ಚಟುವಟಿಕೆಗಳಿಗೆ ಪ್ರಾಮುಖ್ಯತೆ ಕೊಟ್ಟರೆ ಈ ವಿಷಯ ಅವರಿಗೆ ಮನದಟ್ಟಾಗುವುದೇ ಇಲ್ಲ. ಆದ್ದರಿಂದ ಹೆತ್ತವರೇ, 'ನನ್ನ ಮಗು ಫುಟ್‌ಬಾಲ್ ಟೀಮ್‌ಗೆ ಆಪ್ತನಾಗುತ್ತಾ ಕುಟುಂಬ

ಎಂಬ ಟೀಮ್‌ನಿಂದ ದೂರ ಉಳಿದರೆ ಏನು ಪ್ರಯೋಜನ?’ ಎಂದು ನಿಮ್ಮನ್ನೇ ಕೇಳಿಕೊಳ್ಳಿ.

## ನೀವೇನು ಮಾಡಬಹುದು?

**ಚಿಕ್ಕ ವಯಸ್ಸಿನಿಂದಲೇ ಕೆಲಸ ಕೊಡಿ.** ಮಕ್ಕಳಿಗೆ ಮೂರು ವರ್ಷದಿಂದಲೇ ಹೆತ್ತವರು ಕೆಲಸ ಕೊಡಬೇಕು ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಎರಡು ಅಥವಾ ಅದಕ್ಕೂ ಕಡಿಮೆ ವಯಸ್ಸಿನಲ್ಲೇ ಕೆಲಸ ಕೊಡಬೇಕು ಎನ್ನುತ್ತಾರೆ. ಯಾಕೆಂದರೆ, ಎಳೆ ಪ್ರಾಯದಲ್ಲಿ ಮಕ್ಕಳು ತಮ್ಮ ಹೆತ್ತವರ ಜೊತೆಯಲ್ಲಿ ಕೆಲಸ ಮಾಡಲು, ಹೆತ್ತವರನ್ನು ಅನುಕರಿಸಲು ಇಷ್ಟಪಡುತ್ತಾರೆ.—*ಬೈಬಲ್ ತತ್ವ: ಜ್ಞಾನೋಕ್ತಿ 22:6.*

**ವಯಸ್ಸಿಗೆ ತಕ್ಕ ಕೆಲಸ ಕೊಡಿ.** ಉದಾಹರಣೆಗೆ, ಮೂರು ವರ್ಷದ ಮಗುವಿಗೆ ಆಟದ ಸಾಮಾನುಗಳನ್ನು ಎತ್ತಿ ಜೋಡಿಸಿಡುವ, ಏನಾದರೂ ಚೆಲ್ಲಿದರೆ ಅದನ್ನು ಒರೆಸುವ, ತೆಗೆದ ಬಟ್ಟೆ ಎತ್ತಿಡುವ ಕೆಲಸ ಕೊಡಬಹುದು. ದೊಡ್ಡ ಮಕ್ಕಳಿಗೆ ಮನೆ ಗುಡಿಸುವ, ಗಾಡಿ ತೊಳೆಯುವ ಮತ್ತು ಅಡಿಗೆ ಮಾಡುವ ಕೆಲಸ ಕೊಡಬಹುದು. ಹೀಗೆ ನಿಮ್ಮ ಮಕ್ಕಳ ಸಾಮರ್ಥ್ಯಕ್ಕೆ ತಕ್ಕ ಕೆಲಸ ಕೊಡಬಹುದು. ಅವರು ಆಸಕ್ತಿಯಿಂದ ಆ ಕೆಲಸಗಳನ್ನು ಮಾಡುವುದನ್ನು ನೋಡುವಾಗ ನಿಮಗೇ ಆಶ್ಚರ್ಯ ಆಗುತ್ತೆ.

**ಮನೆಯ ಕೆಲಸಕ್ಕೆ ಪ್ರಾಮುಖ್ಯತೆ ಕೊಡಿ.** ನಿಮ್ಮ ಮಕ್ಕಳಿಗೆ ರಾಶಿ ಹೋಮ್‌ವರ್ಕ್ ಇದ್ದಾಗ ಮನೆಯಲ್ಲಿ ಕೆಲಸ ಮಾಡುವುದು ಕಷ್ಟ ಅನ್ನೋದು ನಿಜ. ಆದರೆ, ಹೆಚ್ಚು ಅಂಕ ಪಡೆಯಬೇಕೆಂದು ಕೆಲಸ ಕೊಡದೇ ಇದ್ದರೆ, ನೀವು ‘ತಪ್ಪಾದ ವಿಷಯಗಳಿಗೆ ಪ್ರಾಮುಖ್ಯತೆ ಕೊಟ್ಟಂತಾಗುತ್ತದೆ’ ಎಂದು *ದ ಪ್ರೈಸ್ ಆಫ್ ಪ್ರಿವ್‌ಲೇಜ್* ಎಂಬ ಪುಸ್ತಕ ಹೇಳುತ್ತದೆ. ಈಗಾಗಲೇ ಗಮನಿಸಿದಂತೆ, ಮನೆಯಲ್ಲಿ ಕೆಲಸ ಮಾಡುವುದು ಮಕ್ಕಳು ಶಾಲೆಯಲ್ಲೂ ಚುರುಕಾಗಿರಲು **ಸಹಾಯ** ಮಾಡುತ್ತದೆ. ಈ ಚಿಕ್ಕ ವಯಸ್ಸಿನಲ್ಲಿ ಕಲಿಯುವ ಪಾಠಗಳು ಮುಂದೆ ದೊಡ್ಡವರಾಗಿ ಒಂದು ಕುಟುಂಬ ನಡೆಸುವಾಗ ತುಂಬ ಸಹಾಯ ಮಾಡುತ್ತವೆ.—*ಬೈಬಲ್ ತತ್ವ: ಫಿಲಿಪ್ಪಿ 1:10.*

**ನಿಮ್ಮ ಉದ್ದೇಶವನ್ನು ಮರೆಯಬೇಡಿ.** ನಿಮ್ಮ ಮಗು ಕೆಲಸವನ್ನು ಮಾಡಿ ಮುಗಿಸಲು ನೀವು ನೆನಸಿದ್ದಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳಬಹುದು. ಕೊಟ್ಟ ಕೆಲಸವನ್ನು ಸರಿಯಾಗಿ ಮಾಡಿಲ್ಲ ಎಂದು ನಿಮಗನಿಸಬಹುದು. ಆಗ, ನೀವೇ ಅದನ್ನು ಮಾಡಲು ಹೋಗಬೇಡಿ. ಯಾಕೆಂದರೆ, ಮಕ್ಕಳು ದೊಡ್ಡವರಷ್ಟೇ ಅಚ್ಚುಕಟ್ಟಾಗಿ ಕೆಲಸಮಾಡಬೇಕು ಅನ್ನುವುದು ನಿಮ್ಮ ಉದ್ದೇಶವಲ್ಲ, ಬದಲಿಗೆ ಮಕ್ಕಳಿಗೆ ಜವಾಬ್ದಾರಿ ವಹಿಸಿಕೊಳ್ಳಲು ಕಲಿಸುವುದು ಮತ್ತು ಕೆಲಸದಲ್ಲಿ ಸಿಗುವ ಸಂತೋಷವನ್ನು ತಿಳಿದುಕೊಳ್ಳಲು ಸಹಾಯ ಮಾಡುವುದೇ ನಿಮ್ಮ ಉದ್ದೇಶ ಆಗಿದೆ.—*ಬೈಬಲ್ ತತ್ವ: ಪ್ರಸಂಗಿ 3:22.*

**ಕೆಲಸದಿಂದ ನಿಜ ಪ್ರಯೋಜನ ಪಡೆಯಲು ಸಹಾಯ ಮಾಡಿ.** ಕೆಲಸ ಮಾಡಲು ಹಣ ಕೊಟ್ಟರೆ ಮಕ್ಕಳು ಜವಾಬ್ದಾರಿ ವಹಿಸುವುದನ್ನು ಕಲಿಯುತ್ತಾರೆ ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು, ಹೀಗೆ ಮಾಡಿದರೆ ಮಕ್ಕಳು ‘ನನಗೇನು **ಸಿಗುತ್ತೆ** ಅಂತನೇ ಯೋಚಿಸುತ್ತಾರೆ ಹೊರತು ನಾನೇನು **ಮಾಡಬಹುದು** ಅಂತಲ್ಲ’ ಎಂದು ಹೇಳುತ್ತಾರೆ. ಮಾತ್ರವಲ್ಲ, ಮಕ್ಕಳ ಹತ್ತಿರ ಸಾಕಷ್ಟು ಹಣ ಇದ್ದಾಗ ಅವರು ಕೆಲಸ ಮಾಡಲು ಒಪ್ಪದೇ ಇರಬಹುದು ಅಂತನೂ ಅವರು ಎಚ್ಚರಿಸುತ್ತಾರೆ. ಹೀಗೆ, ಕೆಲಸದಿಂದ ಅವರಿಗೆ ನಿಜ ಪ್ರಯೋಜನ ಸಿಗುವುದಿಲ್ಲ. ಪಾಠ? ಮಕ್ಕಳ ಖರ್ಚಿಗೆ ಹಣ ಕೊಟ್ಟರೂ, ಮನೆಯಲ್ಲಿ ಕೆಲಸ ಮಾಡಿದ್ದಕ್ಕಾಗಿ ಹಣ ಕೊಡದೇ ಇರುವುದೇ ಒಳ್ಳೇದು. ■

### ಬೈಬಲಿನ ನುಡಿಮುತ್ತುಗಳು

“ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು.” —ಜ್ಞಾನೋಕ್ತಿ 22:6.

‘ಹೆಚ್ಚು ಪ್ರಮುಖವಾದ ವಿಷಯಗಳನ್ನು ಖಚಿತಪಡಿಸಿಕೊಳ್ಳಿ.’—ಫಿಲಿಪ್ಪಿ 1:10.

“ಮನುಷ್ಯನು ತನ್ನ ಕಾರ್ಯಗಳಲ್ಲಿ ಉಲ್ಲಾಸಗೊಳ್ಳುವದಕ್ಕಿಂತ ಅವನಿಗೆ ಯಾವ ಮೇಲೂ ಇಲ್ಲ.” —ಪ್ರಸಂಗಿ 3:22.



*“ಮನೆಯ ಕೆಲಸ ಮಾಡಿದರೆ ‘ಕುಟುಂಬಕ್ಕೋಸ್ಕರ ನಾನೂ ಏನೋ ಮಾಡಿದ್ದೇನೆ’ ಎಂಬ ಭಾವನೆಯನ್ನು ಮೂಡಿಸುತ್ತದೆ. ಮನೆಯ ಒಳಗೆ-ಹೊರಗೆ ಕೆಲಸ ಮಾಡಿ ಆ ದಿನ ಮುಗಿಯುವಾಗ ಮನಸ್ಸಿಗೆ ತೃಪ್ತಿ ಸಿಗುತ್ತದೆ. ಎಲ್ಲರೂ ಸೇರಿ ಕೆಲಸ ಮಾಡಿದಾಗ ತುಂಬ ಸಂತೋಷ ಸಿಗುತ್ತೆ.”—ಸ್ಟೀವನ್.*

*“ನಮ್ಮ ಹೆಣ್ಣು ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ಮನೆಯಲ್ಲಿ ಕೆಲಸ ಕೊಟ್ಟಿದ್ದರಿಂದ ದೊಡ್ಡವರಾದ ಮೇಲೂ ಜೀವನದ ಬಗ್ಗೆ ಸರಿಯಾದ ಅಭಿಪ್ರಾಯ ಇಟ್ಟುಕೊಳ್ಳಲು ಅವರಿಗೆ ಸಾಧ್ಯವಾಗಿದೆ. ಕುಟುಂಬ ಅಂದರೆ ಒಂದು ಟೀಮ್ ಥರ ಮತ್ತು ಎಲ್ಲರೂ ಸೇರಿ ಕೆಲಸ ಮಾಡಬೇಕು ಎಂದು ನಾವು ಅವರಿಗೆ ಅರ್ಥಮಾಡಿಸಲು ಪ್ರಯತ್ನಿಸುತ್ತೇವೆ. ನಾವು ಮನೆಯ ಕೆಲಸದ ಬಗ್ಗೆ ಒಳ್ಳೇ ಅಭಿಪ್ರಾಯ ಇಟ್ಟುಕೊಂಡರೆ ನಮ್ಮ ಮಕ್ಕಳೂ ಅದನ್ನೇ ಕಲಿಯುತ್ತಾರೆ.”—ಸ್ಟೆಫನೀ.*

# ಕರುಳಿನ ನರಮಂಡಲ
# ನಮ್ಮ “ಎರಡನೇ ಮೆದುಳು!”

ನಿಮಗೆ ಎಷ್ಟು ಮೆದುಳು ಇದೆ? “ಒಂದು” ಅಂತ ನೀವು ಉತ್ತರಿಸಿದರೆ ಅದು ಸರಿನೇ. ಆದರೆ, ದೇಹದಲ್ಲಿ ಮೆದುಳಿನ ಥರ ಇನ್ನೂ ಹಲವಾರು ನರಮಂಡಲಗಳಿವೆ. ಅವುಗಳಲ್ಲಿನ ನರಕೋಶಗಳ ಒಂದು ಜಾಲ ಎಷ್ಟು ವ್ಯಾಪಕವಾಗಿದೆ ಅಂದರೆ ಅದನ್ನು ಕೆಲವು ವಿಜ್ಞಾನಿಗಳು “ಎರಡನೇ ಮೆದುಳು” ಎಂದು ಕರೆದಿದ್ದಾರೆ! ಈ ಎರಡನೇ ಮೆದುಳೇ “ಕರುಳಿನ ನರ ಮಂಡಲ” (ENS). ಇದು ಮೆದುಳಿನ ಹಾಗೆ ತಲೆಯಲ್ಲಿ ಅಲ್ಲ, ಹೊಟ್ಟೆಯಲ್ಲಿ ಇರುತ್ತದೆ.

ತಿಂದ ಆಹಾರವನ್ನು ಶಕ್ತಿಯನ್ನಾಗಿ ಮಾರ್ಪಡಿಸಲು ನಮ್ಮ ದೇಹದ ಒಳಗಿನ ಅಂಗಗಳು ತುಂಬಾ ಕೆಲಸ ಮಾಡ ಬೇಕು ಮತ್ತು ಒಂದಕ್ಕೊಂದು ಸಹಕಾರ ಕೊಡಬೇಕು. ಆದ್ದ ರಿಂದ ಜೀರ್ಣಕ್ರಿಯೆಯ ಬಹುತೇಕ ಕೆಲಸವನ್ನು ಮೆದುಳು ENSಗೆ ವಹಿಸುತ್ತದೆ.

ENSನ ರಚನೆ ಮೆದುಳಿಗಿಂತ ಸರಳವಾಗಿದ್ದರೂ ತುಂಬಾ ಕ್ಲಿಷ್ಟಕರವಾಗಿದೆ. ಮನುಷ್ಯರ ಕರುಳಿನ ನರ ಮಂಡಲ ದಲ್ಲಿ ಸುಮಾರು 20-60 ಕೋಟಿ ನರಕೋಶಗಳಿವೆ. ನರಕೋ ಶಗಳ ಈ ಕ್ಲಿಷ್ಟಕರ ರಚನೆ ಜೀರ್ಣಾಂಗವ್ಯೂಹದಲ್ಲಿ ಇದೆ. ENSನ ಕೆಲಸವನ್ನು ಒಂದುವೇಳೆ ಮೆದುಳೇ ಮಾಡಬೇಕಾಗಿ ಬಂದಿದ್ದರೆ ಮೆದುಳಿನಲ್ಲಿ ನರಗಳು ದಟ್ಟವಾಗಿ ಇರಬೇಕಾ ಗುತ್ತಿತ್ತು. “ಜೀರ್ಣಾಂಗವ್ಯೂಹ ತನ್ನ ಕೆಲಸವನ್ನು ತಾನೇ ನಿರ್ವಹಿಸುವುದರಿಂದ ಈ ಕೆಲಸವನ್ನು ಸುರಕ್ಷಿತವಾಗಿ ಮತ್ತು ಸುಲಭವಾಗಿ ಮಾಡಲು ಸಾಧ್ಯವಾಗಿದೆ” ಎಂದು ದಿ *ಸೆಕೆಂಡ್ ಬ್ರೇನ್* ಎಂಬ ಪುಸ್ತಕ ಹೇಳುತ್ತದೆ.

## “ರಾಸಾಯನಿಕ ಕಾರ್ಖಾನೆ”

ಆಹಾರ ಜೀರ್ಣವಾಗಬೇಕಾದರೆ ನಿರ್ದಿಷ್ಟ ರಾಸಾಯ ನಿಕಗಳು ಸರಿಯಾದ ಸಮಯದಲ್ಲಿ ಮಿಶ್ರಣವಾಗಿ ಸರಿಯಾದ ಜಾಗಗಳಿಗೆ ಹೋಗಬೇಕು. “ಜೀರ್ಣಾಂಗವ್ಯೂ ಹವು ಒಂದು ರಾಸಾಯನಿಕ ಕಾರ್ಖಾನೆ” ಎಂದು ಪ್ರೊಫೆ ಸರ್ ಗ್ಯಾರಿ ಮಾವೇ ಹೇಳಿರುವುದು ತುಂಬಾ ಸೂಕ್ತ. ಈ ಕ್ರಮಬದ್ಧವಾಗಿ ನಡೆಯುವ ರಾಸಾಯನಿಕ ಕ್ರಿಯೆ ನಮ್ಮನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತದೆ. ಉದಾಹರಣೆಗೆ, ಕರು ಳಿನ ಒಳಪದರವು ವಿಶೇಷವಾದ ಜೀವಕೋಶಗಳಿಂದ ಆವೃತ ವಾಗಿದೆ. ಇವು ಆಹಾರದಲ್ಲಿನ ರಾಸಾಯನಿಕವನ್ನು ಪತ್ತೆ ಹಚ್ಚುವ, ಆಹಾರದ ರುಚಿಯನ್ನು ತಿಳಿಯುವ ಸಾಮರ್ಥ್ಯ ವನ್ನು ಹೊಂದಿದೆ. ಈ ಎಲ್ಲಾ ಮಾಹಿತಿಯ ಸಹಾಯದಿಂದ ENS ಯಾವ ನಿರ್ದಿಷ್ಟ ಕಿಣ್ವಗಳಿಂದ ಆಹಾರ ಜೀರ್ಣವಾ ಗುತ್ತದೆ ಎಂದು ಗುರುತಿಸುತ್ತದೆ. ನಂತರ ನಮ್ಮ ದೇಹವು ಆಹಾರದಲ್ಲಿರುವ ಸಾರವನ್ನು ಹೀರಿಕೊಳ್ಳುತ್ತದೆ. ದೇಹದಲ್ಲಿನ ಆಮ್ಲತೆಯನ್ನು ಮತ್ತು ಆಹಾರದಲ್ಲಿನ ರಾಸಾಯನಿಕಗಳನ್ನು ಸರಿಯಾಗಿ ನಿಯಂತ್ರಿಸುವುದರಲ್ಲಿ ಮತ್ತು ಜೀರ್ಣಕ್ರಿಯೆಯ ಕಿಣ್ವಗಳನ್ನು ಹೊಂದಿಸುವುದರಲ್ಲಿ ENS ಮುಖ್ಯ ಪಾತ್ರವನ್ನು ವಹಿಸುತ್ತದೆ.

ಜೀರ್ಣಾಂಗವು ಒಂದು ಕಾರ್ಖಾನೆಯಲ್ಲಿ ವಸ್ತುಗಳನ್ನು ಸಾಲಾಗಿ ಸಾಗಿಸುವ ವ್ಯವಸ್ಥೆಯಂತಿದ್ದು, ಇದನ್ನು ಮುಖ್ಯ ವಾಗಿ ENS ನಿರ್ವಹಿಸುತ್ತದೆ. ಈ ENS ಅಥವಾ “ಎರಡನೇ ಮೆದುಳು” ಆಹಾರವನ್ನು ಜೀರ್ಣಾಂಗವ್ಯೂಹದ ಮೂಲಕ ಸಾಗಿಸುತ್ತದೆ. ಹೀಗೆ ಸಾಗಿಸುವಂತೆ ಜೀರ್ಣಾಂಗ ವ್ಯವಸ್ಥೆಯ ಒಳಪದರದ ಸ್ನಾಯುಗಳನ್ನು ಸಂಕುಚಿತಗೊಳಿಸುತ್ತದೆ. ENS ಈ ಸ್ನಾಯುಗಳ ಸಂಕುಚಿತದ ಬಲವನ್ನು ಮತ್ತು ವೇಗವನ್ನು ನಿಯಂತ್ರಿಸುತ್ತದೆ.

ಇದು ಸುರಕ್ಷಾ ಕೆಲಸವನ್ನು ಸಹ ನೋಡಿಕೊಳ್ಳುತ್ತದೆ. ನೀವು ಸೇವಿಸುವ ಆಹಾರದಲ್ಲಿ ಸಾಮಾನ್ಯವಾಗಿ ಹಾನಿಕಾರಕ ಬ್ಯಾಕ್ಟೀರಿಯಗಳು ಇರುತ್ತವೆ. ಆದ್ದರಿಂದ ರೋಗನಿರೋಧಕ ಶಕ್ತಿಗೆ ಅಗತ್ಯವಾದ ಲಿಂಫೊಸೈಟ್ ಕೋಶಗಳು ನಿಮ್ಮ ಹೊಟ್ಟೆ ಯಲ್ಲಿ 70-80 ಪ್ರತಿಶತ ಇರುತ್ತವೆ. ಒಂದುವೇಳೆ, ಹಾನಿಕಾ ರಕ ಸೂಕ್ಷ್ಮಾಣು ಜೀವಿಗಳು ಹೆಚ್ಚಾಗಿ ದೇಹದೊಳಗೆ ಪ್ರವೇಶಿ ಸಿದರೆ ENS ನಿಮ್ಮ ರಕ್ಷಣೆಗೆ ಬರುತ್ತದೆ. ಇದಕ್ಕಾಗಿ ಅದು ಸ್ನಾಯುಗಳನ್ನು ಹೆಚ್ಚು ಸಂಕುಚಿತಗೊಳಿಸಿ ಹಾನಿಕಾರಕ ಅಂಶ ಗಳನ್ನು ವಾಂತಿ ಮತ್ತು ಭೇದಿಯ ಮೂಲಕ ಹೊರಹಾಕುತ್ತದೆ.





ಜೀರ್ಣಾಂಗವ್ಯೂಹದಲ್ಲಿರುವ ಕರುಳಿನ ನರ ಮಂಡಲ ಅಥವಾ ENS (ನೀಲಿ ಬಣ್ಣದಲ್ಲಿದೆ).

## ಒಳ್ಳೆಯ ಸಂಪರ್ಕ

ENS ಸ್ವತಂತ್ರವಾಗಿ ಕೆಲಸ ಮಾಡುವುದಾದರೂ ಇದು ಮೆದುಳಿನೊಂದಿಗೆ ಸತತವಾಗಿ ಸಂಪರ್ಕ ಹೊಂದಿರುತ್ತದೆ. ಉದಾಹರಣೆಗೆ, ಯಾವಾಗ ತಿನ್ನಬೇಕು, ಎಷ್ಟು ತಿನ್ನಬೇಕು ಎಂಬ ಮಾಹಿತಿಯನ್ನು ಮೆದುಳಿಗೆ ತಿಳಿಸುವ ಹಾರ್ಮೋನುಗಳನ್ನು ENS ನಿಯಂತ್ರಿಸುತ್ತದೆ. ಹೊಟ್ಟೆ ತುಂಬಿದಾಗ ಆ ಮಾಹಿತಿಯನ್ನು ಮೆದುಳಿಗೆ ನರಕೋಶಗಳ ಮೂಲಕ ತಿಳಿಸುತ್ತದೆ ಮತ್ತು ಇನ್ನೂ ಹೆಚ್ಚು ತಿಂದರೆ ವಾಕರಿಕೆ ತರಿಸುತ್ತದೆ.

ಮೆದುಳಿಗೂ ಜೀರ್ಣಾಂಗವ್ಯೂಹಕ್ಕೂ ಸಂಪರ್ಕವಿದೆ ಎಂದು ಈ ಲೇಖನವನ್ನು ಓದುವ ಮುಂಚೆಯೇ ನಿಮಗೆ ಅನಿಸಿರಬಹುದು. ಸಾಮಾನ್ಯವಾಗಿ ಕೊಬ್ಬಿನಾಂಶ ಇರುವ ಆಹಾರವನ್ನು ತಿಂದಾಗ ಖುಷಿಯಾಗುತ್ತದೆ. ಇಂತಹ ಆಹಾರ ತಿಂದಾಗ ENS ಮೆದುಳಿಗೆ ಸಂತೋಷದ ಸೂಚನೆಯನ್ನು ಕಳುಹಿಸುತ್ತದೆ ಎಂದು ಸಂಶೋಧನೆಗಳು ತಿಳಿಸಿವೆ. ಆಗ ನಿಮಗೆ ಸಂತೋಷ ಆಗುತ್ತದೆ. ಅದಕ್ಕೇ, ಜನರು ಒತ್ತಡದಲ್ಲಿದ್ದಾಗ ಅವರಿಗಿಷ್ಟವಾಗುವ ಆಹಾರವನ್ನು ತಿನ್ನಬೇಕೆಂದು ಬಯಸುತ್ತಾರೆ. ಖಿನ್ನತೆಗೆ ಒಳಗಾಗಿರುವ ರೋಗಿಗಳಿಗೆ ಚಿಕಿತ್ಸೆ ನೀಡಲು ವಿಜ್ಞಾನಿಗಳು ENS ಅನ್ನು ಕೃತಕವಾಗಿ ಪ್ರೇರೇಪಿಸುವ ವಿಧಾನಗಳಿಗಾಗಿ ಹುಡುಕುತ್ತಿದ್ದಾರೆ.

ಮೆದುಳು ಮತ್ತು ಜೀರ್ಣಾಂಗವ್ಯೂಹದ ಮಧ್ಯೆ ಸಂಪರ್ಕ ಇದೆ ಎಂದು ತಿಳಿಸುವ ಮತ್ತೊಂದು ಉದಾಹರಣೆಯು ನಿಮಗಾಗುವ ಒತ್ತಡ. ಮೆದುಳು ಒತ್ತಡಕ್ಕೆ ಒಳಗಾದಾಗ ENS ಹೊಟ್ಟೆಯ ಕಡೆಗೆ ರಕ್ತ ಹರಿಯದಂತೆ ತಡೆಯುತ್ತದೆ. ಒತ್ತಡದಲ್ಲಿದ್ದಾಗ ಮೆದುಳು ENSಗೆ ಸಂದೇಶವನ್ನು ಕಳುಹಿಸುವ ಮೂಲಕ ಕರುಳಿನ ಸಾಮಾನ್ಯ ಸಂಕುಚನಗಳನ್ನು ಬದಲಾಯಿಸುತ್ತದೆ. ಹಾಗಾಗಿ ವಾಕರಿಕೆಯಾಗುತ್ತದೆ. ಈ ಅನಿಸಿಕೆ ಬರಲು ಕರುಳು ಮತ್ತು ಮೆದುಳಿಗಿರುವ ಸಂಬಂಧ ಸಹ ಕಾರಣವಾಗಿರಬಹುದು ಎನ್ನುವುದು ತಜ್ಞರ ಅಭಿಪ್ರಾಯ.

ENS ನಮ್ಮಲ್ಲಿ ಇಂತಹ ಅನಿಸಿಕೆಗಳನ್ನು ತರಬಹುದಾದರೂ ಅದು ಮೆದುಳಿನಂತೆ ಯೋಚಿಸುವ, ನಿರ್ಧಾರ ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅದು ನಿಜವಾದ ಮೆದುಳಲ್ಲ, ಒಂದು ಹಾಡು ಬರೆಯಲು, ಲೆಕ್ಕಾಚಾರ ಮಾಡಲು, ಹೋಮ್ ವರ್ಕ್ ಮಾಡಲು ಅದು ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲ. ಆದರೂ, ಈ ಅದ್ಭುತ ವ್ಯವಸ್ಥೆ ತನ್ನ ಕ್ಲಿಷ್ಟಕರ ರಚನೆಯಿಂದ ವಿಜ್ಞಾನಿಗಳನ್ನು ಆಶ್ಚರ್ಯಪಡಿಸುತ್ತಲೇ ಇದೆ. ವಿಜ್ಞಾನಿಗಳಿಗೆ ಇದರ ಬಗ್ಗೆ ತಿಳಿದಿರುವುದು ಅಲ್ಪಸ್ವಲ್ಪವಷ್ಟೆ. ಇನ್ನೂ ತಿಳಿಯಬೇಕಾಗಿರುವುದು ಬೆಟ್ಟದಷ್ಟಿದೆ! ಸರಿ ಹಾಗಾದ್ರೆ, ಮುಂದಿನ ಸಲ ಊಟಮಾಡುವ ಮುಂಚೆ ಒಂದು ಕ್ಷಣ ನಿಮ್ಮ ಜೀರ್ಣ ವ್ಯವಸ್ಥೆಯಲ್ಲಿ ನಡೆಯುವ ನಿರ್ವಹಣೆ, ಮಾಹಿತಿ ರವಾನೆ, ಸಂಯೋಜನೆ, ಮಾಹಿತಿ ವಿನಿಮಯದ ಬಗ್ಗೆ ಸ್ವಲ್ಪ ಯೋಚಿಸಿ. ■



# ಒಬ್ಬ ಸಾಫ್ಟ್‌ವೇರ್ ವಿನ್ಯಾಸಕ ತನ್ನ ನಂಬಿಕೆಯ ಬಗ್ಗೆ ಮಾತಾಡುತ್ತಾರೆ

ಡಾ. ಫಾನ್ ಯೂರವರು ಬೀಜಿಂಗ್‌ನಲ್ಲಿರುವ ಚೈನಾ ಇನ್‌ಸ್ಟಿಟ್ಯೂಟ್ ಆಫ್ ಆಟೋಮಿಕ್ ಎನರ್ಜಿ ಎಂಬಲ್ಲಿ ಗಣಿತಶಾಸ್ತ್ರ ಸಂಶೋಧಕರಾಗಿ ಕೆಲಸ ಮಾಡುವ ಮೂಲಕ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಆಗ ಅವರು ದೇವರನ್ನು ನಂಬುತ್ತಿರಲಿಲ್ಲ, ವಿಕಾಸವಾದವನ್ನು ನಂಬುತ್ತಿದ್ದರು. ಆದರೆ ಈಗ ಅವರು ಜೀವವು ದೇವರಿಂದ ವಿನ್ಯಾಸಿಸಲಾಗಿದೆ ಅಥವಾ ಸೃಷ್ಟಿಸಲಾಗಿದೆ ಎಂದು ನಂಬುತ್ತಾರೆ. ಅವರ ನಂಬಿಕೆಯ ಬಗ್ಗೆ *ಎಚ್ಚರ!* ಪತ್ರಿಕೆ ಕೇಳಿದಾಗ ಅವರು ಹೇಳಿದ್ದು . . .

## ನಿಮ್ಮ ಬಗ್ಗೆ ಸ್ವಲ್ಪ ಹೇಳ್ತೀರಾ?

ನಾನು ಹುಟ್ಟಿದ್ದು 1959ರಲ್ಲಿ ಚೀನಾದ ಜ್ಯಾನ್ಶಿ ರಾಜ್ಯದ ಫೂಜೋ ಎಂಬ ಪಟ್ಟಣದಲ್ಲಿ. ನನಗೆ ಎಂಟು ವರ್ಷವಾದಾಗ ನಮ್ಮ ದೇಶ ಸಾಂಸ್ಕೃತಿಕ ಕ್ರಾಂತಿಯ ಪರಿಣಾಮಗಳನ್ನು ಎದುರಿಸುತ್ತಿತ್ತು. ನನ್ನ ತಂದೆ ಸಿವಿಲ್ ಎಂಜಿನಿಯರ್ ಆಗಿದ್ದರು. ಅವರಿಗೆ ಬಹು ದೂರದ ಕಾಡು ಪ್ರದೇಶದಲ್ಲಿ ರೈಲು ಮಾರ್ಗವನ್ನು ನಿರ್ಮಿಸುವಂತೆ ಹೇಳಲಾಯಿತು. ಹಾಗಾಗಿ, ಅನೇಕ ವರ್ಷಗಳವರೆಗೆ ಅವರು ನಮ್ಮನ್ನು ವರ್ಷಕ್ಕೊಮ್ಮೆ ಮಾತ್ರ ಭೇಟಿಯಾಗುತ್ತಿದ್ದರು. ಆಗ ನಾನು ನನ್ನ ಅಮ್ಮನ ಜೊತೆಯಲ್ಲಿ ವಾಸವಾಗಿದ್ದೆ. ನಮ್ಮ ಅಮ್ಮ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮಾಡುತ್ತಿದ್ದ ಶಾಲೆಯಲ್ಲೇ ನಾವು ವಾಸವಾಗಿದ್ದೆವು. 1970ರಲ್ಲಿ ಲಿನ್‌ಚ್ವಾನ್ ರಾಜ್ಯದ ಯೂಫಾನ್ ಎಂಬ ಹಳ್ಳಿಗೆ ಸ್ಥಳಾಂತರಿಸಬೇಕಾಯಿತು. ಅದು ತುಂಬ ಬಡ ಹಳ್ಳಿಯಾಗಿದ್ದು, ಅಲ್ಲಿ ಆಹಾರದ ಅಭಾವ ಇತ್ತು.

## ನಿಮ್ಮ ಹೆತ್ತವರ ನಂಬಿಕೆ ಏನಾಗಿತ್ತು?

ನಮ್ಮ ತಂದೆಗೆ ಧರ್ಮದಲ್ಲಾಗಲಿ, ರಾಜಕೀಯದಲ್ಲಾಗಲಿ ಆಸಕ್ತಿ ಇರಲಿಲ್ಲ. ನಮ್ಮ ಅಮ್ಮ ಬೌದ್ಧ ಧರ್ಮವನ್ನು ಅನುಸರಿಸುತ್ತಿದ್ದರು. ಶಾಲೆಯಲ್ಲಿ ನನಗೆ, ಜೀವ ತನ್ನಿಂದ ತಾನೇ ಬಂತು ಎಂದು ಕಲಿಸಲಾಯಿತು. ನನ್ನ ಶಿಕ್ಷಕರು ಹೇಳಿದ್ದನ್ನು ನಾನು ನಂಬಿದ್ದೆ.

## ನಿಮಗೆ ಗಣಿತಶಾಸ್ತ್ರದಲ್ಲಿ ಹೇಗೆ ಆಸಕ್ತಿ ಹುಟ್ಟಿತು?

ಗಣಿತಶಾಸ್ತ್ರದಲ್ಲಿ ತರ್ಕಗಳ ಆಧಾರವಾಗಿ ಸತ್ಯವನ್ನು ಕಂಡುಹಿಡಿಯಲಾಗುತ್ತದೆ. ಹಾಗಾಗಿ ನನಗದು ಇಷ್ಟವಾಯಿತು. 1976ರಲ್ಲಿ ಆ ಕ್ರಾಂತಿಯ ನಾಯಕನಾದ ಮಾವೊ ಟ್ಸೆ-ತುಂಗ್ ಸತ್ತ ಸ್ವಲ್ಪದರಲ್ಲೇ ನಾನು ವಿಶ್ವವಿದ್ಯಾನಿಲಯಕ್ಕೆ ಹೋದೆ. ನಾನು ಗಣಿತಶಾಸ್ತ್ರವನ್ನು ಮುಖ್ಯ ವಿಷಯವಾಗಿ ಆರಿಸಿಕೊಂಡೆ. ಈ ಉನ್ನತ ಪದವಿ ಪಡೆದ ನಂತರ ನಾನು ನ್ಯೂಕ್ಲಿಯರ್ ಶಕ್ತಿ ಉತ್ಪಾದಕಗಳ ವಿನ್ಯಾಸಕ್ಕಾಗಿ ಗಣಿತಶಾಸ್ತ್ರ ಸಂಶೋಧನೆ ಮಾಡುವ ಕೆಲಸ ಮಾಡಿದೆ.

## ಬೈಬಲ್ ಬಗ್ಗೆ ನಿಮಗೆ ಯಾವ ಅಭಿಪ್ರಾಯ ಇತ್ತು?

1987ರಲ್ಲಿ ನಾನು ಟೆಕ್ಸಾಸ್‌ನ ಎ ಆ್ಯಂಡ್ ಎಮ್ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ವಿದ್ಯಾಭ್ಯಾಸ ಮಾಡಲು ಅಮೆರಿಕಾಕ್ಕೆ ಬಂದೆ. ಅಮೆರಿಕದಲ್ಲಿ ಅನೇಕರು ದೇವರನ್ನು ನಂಬುತ್ತಾರೆ ಮತ್ತು ಬೈಬಲ್ ಓದುತ್ತಾರೆಂದು ನನಗೆ ಗೊತ್ತಿತ್ತು. ಬೈಬಲಿನಲ್ಲಿ ಜೀವನಕ್ಕೆ ಪ್ರಯೋಜನವಾಗುವ ವಿವೇಕಯುತ ವಿಷಯಗಳಿವೆ ಎಂದು ನಾನು ಕೇಳಿಸಿ

ಕೊಂಡಿದ್ದೆ. ಆದ್ದರಿಂದ ಅದನ್ನು ಓದ ಬೇಕೆಂದು ಅಂದುಕೊಂಡೆ.

ಬೈಬಲಿನ ಬೋಧನೆಗಳು ಜೀವನಕ್ಕೆ ತುಂಬ ಪ್ರಯೋಜನಕರ ಎಂದು ನನಗನಿಸಿತು. ಆದರೆ ಬೈಬಲಿನ ಕೆಲವು ಭಾಗಗಳನ್ನು ಅರ್ಥಮಾಡಿಕೊಳ್ಳಲು ನನಗೆ ತುಂಬ ಕಷ್ಟವಾಯಿತು. ಹಾಗಾಗಿ, ನಾನದನ್ನು ಓದುವುದನ್ನೇ ನಿಲ್ಲಿಸಿಬಿಟ್ಟೆ.

### ಬೈಬಲ್‌ ಬಗ್ಗೆ ಪುನಃ ಆಸಕ್ತಿ ಬರಲು ಕಾರಣವೇನು?

1990ರಲ್ಲಿ ಯೆಹೋವನ ಸಾಕ್ಷಿಗಳಲ್ಲೊಬ್ಬರು ನನ್ನ ಮನೆಗೆ ಬಂದರು. ಮನಷ್ಯರೆಲ್ಲರಿಗೆ ಇರುವ ಉತ್ತಮ ಭವಿಷ್ಯದ ಬಗ್ಗೆ ಬೈಬಲ್‌ ಏನು ಹೇಳುತ್ತದೆ ಎಂದು ಅವರು ತೋರಿಸಿದರು. ದಂಪತಿಯೊಬ್ಬರು ನಮ್ಮ ಮನೆಗೆ ಬಂದು ನಾನು ಬೈಬಲನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವಂತೆ ಅವರು ಏರ್ಪಾಡು ಮಾಡಿದರು. ನನ್ನ ಹೆಂಡತಿ ಲೀಪಿನ್‌ ಸಹ ಬೈಬಲ್‌ ಕಲಿಯಲು ಆರಂಭಿಸಿದಳು. ಚೀನಾದಲ್ಲಿದ್ದಾಗ ಹೈಸ್ಕೂಲ್‌ನಲ್ಲಿ ಭೌತಶಾಸ್ತ್ರ ಕಲಿಸುತ್ತಿದ್ದ ಅವಳು ಮುಂಚೆ ದೇವರನ್ನು ನಂಬುತ್ತಿರಲಿಲ್ಲ. ಜೀವದ ಆರಂಭ ಹೇಗಾಯಿತು ಅನ್ನುವುದರ ಬಗ್ಗೆ ಬೈಬಲ್‌ ಏನು ಹೇಳುತ್ತದೆ ಎಂದು ನಾವು ಕಲಿತೆವು. ಸೃಷ್ಟಿಕರ್ತ ಇದ್ದಾನೆ ಅನ್ನೋದು ನನಗೆ ಹೊಸ ವಿಷಯವಾಗಿತ್ತು. ಹಾಗಾಗಿ, ಇದು ನಿಜನಾ ಎಂದು ಸಂಶೋಧನೆ ಮಾಡಲು ನಿರ್ಧಾರ ಮಾಡಿದೆ.

### ನೀವು ಹೇಗೆ ಸಂಶೋಧನೆ ಮಾಡಿದಿರಿ?

ಗಣಿತಶಾಸ್ತ್ರಜ್ಞನಾಗಿ ನನಗೆ ಯಾವುದೇ ಒಂದು ವಿಷಯ ಸಂಭವಿಸುವ ಸಾಧ್ಯತೆ ಎಷ್ಟಿದೆ ಎಂದು ಲೆಕ್ಕಹಾಕಿ ನೋಡುವ ತರಬೇತಿ ಕೊಡಲಾಗಿತ್ತು. ಜೀವ ತನ್ನಿಂದ ತಾನೇ ಬರಬೇಕೆಂದರೆ ಮೊದಲೇ ಪ್ರೋಟೀನ್‌ಗಳು ಇರಬೇಕು ಎಂದು ಕಲಿತಿದ್ದೆ. ಆದ್ದರಿಂದ ಪ್ರೋಟೀನ್‌ಗಳು ಯಾರ ಕೈವಾಡ ಇಲ್ಲದೆ ತನ್ನಿಂದ ತಾನೇ ಬರಲು ಸಾಧ್ಯ ಇದೆಯಾ ಎಂದು ನೋಡಲು ನಾನು ಪ್ರಯತ್ನಿಸಿದೆ. ಪ್ರೋಟೀನ್‌ಗಳು ಹೆಚ್ಚು ಕ್ಲಿಷ್ಟಕರವಾದ ಅಣುಗಳಾಗಿವೆ. ಜೀವಕೋಶಗಳಲ್ಲಿ ಬೇರೆ ಬೇರೆ ವಿಧದ ಸಾವಿರಾರು ಪ್ರೋಟೀನ್‌ಗಳಿದ್ದು ಅವು ವ್ಯವಸ್ಥಿತ ರೀತಿಯಲ್ಲಿ ಕೆಲಸಮಾಡುತ್ತವೆ. ಹಾಗಾಗಿ, ಪ್ರೋಟೀನ್‌ಗಳು ತನ್ನಿಂದ ತಾನೇ ಬರಲು ಸಾಧ್ಯವೇ ಇಲ್ಲ ಎಂದು ಅನೇಕರಂತೆ ನನಗೂ ಗೊತ್ತಾಯಿತು. ತುಂಬ ಜಟಿಲವಾದ ಮತ್ತು ಜೀವ ವ್ಯವಸ್ಥೆಯ ಅತಿ ಮುಖ್ಯ ಭಾಗವಾದ ಈ ಅಣು ತನ್ನಿಂದ ತಾನೇ ಹೇಗೆ ಬಂತು ಎನ್ನುವುದಕ್ಕೆ ವಿಕಾಸವಾದದಲ್ಲೂ ನನಗೆ ತೃಪ್ತಿಕರ ಉತ್ತರ ಸಿಗಲಿಲ್ಲ. ಆದ್ದರಿಂದ, ಸೃಷ್ಟಿಕರ್ತ ಇದ್ದಾನೆ ಎಂಬ ಸತ್ಯಾಂಶ ನನಗೆ ಗೊತ್ತಾಯಿತು.

### ಬೈಬಲ್‌ ದೇವರೇ ಬರೆಸಿದ್ದು ಎಂದು ಏಕೆ ಅನಿಸಿತು?

ಯೆಹೋವನ ಸಾಕ್ಷಿಗಳ ಸಹಾಯ ಪಡೆದು ನಾನು ಬೈಬಲನ್ನು ಕಲಿಯುತ್ತಾ ಹೋದಂತೆ ಅನೇಕ ವಿಷಯಗಳು ಅವು ಸಂಭವಿಸುವುದಕ್ಕೂ ಮುಂಚೆಯೇ ಬೈಬಲಿನಲ್ಲಿ ಬರೆಯಲಾದದ್ದನ್ನು ನೋಡಿದೆ. ಮಾತ್ರವಲ್ಲ, ಅಲ್ಲಿ ಬರೆದ ಹಾಗೆಯೇ ಸಂಭವಿಸಿತ್ತು. ಬೈಬಲ್‌ನಲ್ಲಿರುವ ತತ್ವಗಳ ಪ್ರಕಾರ ಜೀವಿಸುವಾಗ ನನಗೆ ತುಂಬ ಪ್ರಯೋಜನವಾಯಿತು. ಸಾವಿರಾರು ವರ್ಷಗಳ ಹಿಂದೆ ಇದ್ದ ಬೈಬಲ್‌ ಬರಹಗಾರರು ಇಂದಿನ ನಮ್ಮ ಜೀವನಕ್ಕೆ ಪ್ರಯೋಜನವಾಗುವ ವಿವೇಕಯುತ ವಿಷಯಗಳನ್ನು ಹೇಗೆ ಬರೆದರು? ಎಂದು ನನಗೆ ಆಶ್ಚರ್ಯವಾಯಿತು. ಕ್ರಮೇಣ, ಬೈಬಲ್‌ ದೇವರೇ ಬರೆಸಿದ್ದು ಎಂದು ನನಗೆ ಅರ್ಥ ಆಯಿತು.

### ಸೃಷ್ಟಿಕರ್ತನು ಇದ್ದಾನೆ ಎಂದು ಈಗಲೂ ಯಾವ ವಿಷಯಗಳು ನಿಮಗೆ ಸ್ಪಷ್ಟಪಡಿಸುತ್ತಿವೆ?

ಪರಿಸರದಲ್ಲಿರುವ ಅನೇಕ ವಿಷಯಗಳನ್ನು ಗಮನಿಸುವಾಗ ಸೃಷ್ಟಿಕರ್ತನು ಇದ್ದಾನೆ ಎಂದು ನಂಬಲೇಬೇಕಾಗುತ್ತದೆ. ಈಗ ನಾನು ಕಂಪ್ಯೂಟರ್‌ಗಳಿಗಾಗಿ ಸಾಫ್ಟ್‌ವೇರನ್ನು ತಯಾರಿಸುತ್ತಿದ್ದೇನೆ. ನಮ್ಮ ಮೆದುಳು ಕಂಪ್ಯೂಟರ್‌ ಪ್ರೋಗ್ರಾಂಗಳಿಗಿಂತ ಉತ್ತಮ ರೀತಿಯಲ್ಲಿ ಕೆಲಸ ಮಾಡುವುದನ್ನು ನೋಡುವಾಗ ಆಶ್ಚರ್ಯ ಆಗುತ್ತದೆ. ಉದಾಹರಣೆಗೆ, ಸ್ವರ ಅಥವಾ ಮಾತನ್ನು ಗುರುತಿಸುವ ನಮ್ಮ ಮೆದುಳಿನ ಸಾಮರ್ಥ್ಯ ವಿಶೇಷವಾದದ್ದು. ನಾವು ಸುಲಭವಾಗಿ ವಾಕ್ಯಗಳನ್ನು, ನಗು, ಕೆಮ್ಮು, ತೊದಲು ಮಾತು, ಬೇರೆ ಬೇರೆ ಉಚ್ಛಾರಣೆಗಳು, ಪ್ರತಿಧ್ವನಿ, ಟೆಲಿಫೋನ್‌ನಲ್ಲಿ ಕೇಳುವ ಸ್ವರ ಹೀಗೆ ಎಲ್ಲಾ ಸ್ವರವನ್ನು ಗುರುತಿಸಿ ಅರ್ಥಮಾಡಿಕೊಳ್ಳುತ್ತೇವೆ. ಇದೆಲ್ಲಾ ನಮ್ಮ ದಿನನಿತ್ಯದ ಸಾಮಾನ್ಯ ವಿಷಯ ಅಂತ ನೀವು ಹೇಳಬಹುದು. ಆದರೆ ಸಾಫ್ಟ್‌ವೇರ್‌ ತಯಾರಿಸುವವರಿಗೆ ಇದು ಸಾಮಾನ್ಯ ವಿಷಯ ಅಲ್ಲ. ಸ್ವರವನ್ನು ಗುರುತಿಸಲು ತಯಾರಿಸಲಾದ ಅತ್ಯುತ್ತಮ ಸಾಫ್ಟ್‌ವೇರ್‌ ಸಹ ಮನುಷ್ಯನ ಮೆದುಳಿನ ಮುಂದೆ ಏನೂ ಅಲ್ಲ.

ಮೆದುಳು ನಮ್ಮ ಭಾವನೆಗಳನ್ನು, ಬೇರೆ ಬೇರೆ ಉಚ್ಛಾರಣೆಗಳನ್ನು ಗುರುತಿಸುತ್ತದೆ. ಮಾತ್ರವಲ್ಲ, ಸ್ವರವನ್ನು ಕೇಳಿ ಅದನ್ನು ಹೇಳಿದ ವ್ಯಕ್ತಿ ಯಾರೆಂದೂ ಗುರುತಿಸುತ್ತದೆ. ಇದನ್ನು ಇಷ್ಟು ನಿಷ್ಕೃಷ್ಟವಾಗಿ ಯಾವ ಅತ್ಯಾಧುನಿಕ ಕಂಪ್ಯೂಟರ್‌ ಸಹ ಮಾಡುವುದಿಲ್ಲ. ಆದ್ದರಿಂದ ಸ್ವರವನ್ನು ಗುರುತಿಸುವ ಮೆದುಳಿಗಿರುವ ಸಾಮರ್ಥ್ಯವನ್ನು ಕಂಪ್ಯೂಟರ್‌ನಲ್ಲೂ ಹೇಗೆ ಅಳವಡಿಸುವುದು ಎಂದು ಸಾಫ್ಟ್‌ವೇರ್‌ ಇಂಜಿನಿಯರ್‌ಗಳು ಸಂಶೋಧನೆ ಮಾಡುತ್ತಿದ್ದಾರೆ. ಈ ಕೆಲಸ ಮಾಡುವ ಮೂಲಕ ಅವರು ದೇವರ ಕೈಕೆಲಸವನ್ನು ಅಧ್ಯಯನ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿದೆ. ■

ಸೃಷ್ಟಿಕರ್ತ ಇದ್ದಾನೆ ಅನ್ನೋದು ನನಗೆ ಹೊಸ ವಿಷಯವಾಗಿತ್ತು. ಹಾಗಾಗಿ, ಇದು ನಿಜನಾ ಎಂದು ಸಂಶೋಧನೆ ಮಾಡಲು ನಿರ್ಧಾರ ಮಾಡಿದೆ

# ದೇವದೂತರು

ಸಾಮಾನ್ಯವಾಗಿ ದೇವದೂತರನ್ನು ಚಿತ್ರಗಳಲ್ಲಿ, ಪುಸ್ತಕಗಳಲ್ಲಿ ಮತ್ತು ಸಿನಿಮಾಗಳಲ್ಲಿ ವಿಭಿನ್ನವಾಗಿ ವರ್ಣಿಸಲಾಗಿದೆ. ಆದರೆ ದೇವದೂತರು ನಿಜವಾಗಿಯೂ ಯಾರು? ಅವರ ಕೆಲಸವೇನು?

## ದೇವದೂತರು ಯಾರು?

**ಬೈಬಲ್ ಏನು ಹೇಳುತ್ತದೆ?** ವಿಶ್ವವನ್ನು ಮತ್ತು ಮೊದಲ ಮಾನವರನ್ನು ಸೃಷ್ಟಿಸುವ ಮೊದಲೇ ದೇವರು ಬುದ್ಧಿಶಾಲಿ ಆತ್ಮಜೀವಿಗಳನ್ನು ಸೃಷ್ಟಿಸಿದ್ದನು. ಅವರು ಮಾನವರಿಗಿಂತ ಉನ್ನತರೂ ಎಷ್ಟೋ ಶಕ್ತಿಶಾಲಿಗಳೂ ಆಗಿದ್ದಾರೆ. ದೇವದೂತರು ಕೂಡ ದೇವರು ಇರುವ ಸ್ಥಳದಲ್ಲಿಯೇ ಇದ್ದಾರೆ. ಮನುಷ್ಯರು ಆ ಸ್ಥಳಕ್ಕೆ ಹೋಗಲು ಅಥವಾ ಅದನ್ನು ನೋಡಲು ಸಾಧ್ಯವಿಲ್ಲ. (ಯೋಬ 38:4, 7) ಈ ಉನ್ನತ ಜೀವಿಗಳನ್ನು ಬೈಬಲ್ ಆತ್ಮಜೀವಿಗಳು ಮತ್ತು 'ದೇವದೂತರು' ಎಂದು ಕರೆಯಲಾಗಿದೆ.—ಕೀರ್ತನೆ 104:4; 103:20. *

* ಕೆಲವು ಆತ್ಮಜೀವಿಗಳು ದೇವರ ಅಧಿಕಾರದ ವಿರುದ್ಧ ತಿರುಗಿಬಿದ್ದರು ಎಂದು ಬೈಬಲ್ ಹೇಳುತ್ತದೆ. ಈ ದುಷ್ಟ ದೇವದೂತರನ್ನು ಬೈಬಲ್ "ದೆವ್ವಗಳು" ಎಂದು ಕರೆಯುತ್ತದೆ.—ಲೂಕ 10:17-20.

ಇಷ್ಟಕ್ಕೂ ಎಷ್ಟು ಮಂದಿ ದೇವದೂತರಿದ್ದಾರೆ? ಅಪಾರ ಸಂಖ್ಯೆಯ ದೂತರಿದ್ದಾರೆ. ದೇವರ ಸಿಂಹಾಸನದ ಸುತ್ತಲೂ 'ಕೋಟ್ಯಾನುಕೋಟಿ ಲಕ್ಷೋಪಲಕ್ಷ' ದೇವದೂತರಿದ್ದಾರೆ. (ಪ್ರಕಟನೆ 5:11) ಈ ಸಂಖ್ಯೆಯನ್ನು ಅಕ್ಷರಾರ್ಥವಾಗಿ ಪರಿಗಣಿಸುವುದಾದರೆ ದೇವದೂತರ ಸಂಖ್ಯೆ ಕೋಟಿಗಟ್ಟಲೆ ಇದೆ!

*'ಇದಲ್ಲದೆ ನಾನು ನೋಡಿದಾಗ ಸಿಂಹಾಸನದ ಸುತ್ತಲೂ ಅನೇಕ ದೇವದೂತರಿದ್ದರು. ಅವರ ಸಂಖ್ಯೆಯು ಕೋಟ್ಯಾನುಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು.'—ಪ್ರಕಟನೆ 5:11.*

## ಹಿಂದಿನ ಕಾಲದಲ್ಲಿ ದೇವದೂತರು ಏನು ಮಾಡಿದರು?

**ಬೈಬಲ್ ಏನು ಹೇಳುತ್ತದೆ?** ದೇವದೂತರು ದೇವರ ಸಂದೇಶವಾಹಕರಾಗಿ ಕೆಲಸ ಮಾಡಿದರು.* ದೇವರ ಸಹಾಯದಿಂದ ಅದ್ಭುತಕಾರ್ಯಗಳನ್ನು ಮಾಡುವವರು ಎಂದು ಬೈಬಲ್‌ನಲ್ಲಿ ಅವರನ್ನು ವರ್ಣಿಸಲಾಗಿದೆ. ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಯಜ್ಞವಾಗಿ ಅರ್ಪಿಸುವಾಗ ಅವನನ್ನು ತಡೆದು ಆಶೀರ್ವದಿಸಲು ದೇವರು ತನ್ನ ದೂತನನ್ನು ಕಳುಹಿಸಿದನು. (ಆದಿಕಾಂಡ 22:11-18) ಜೀವನವೇ ಬದಲಾಯಿಸುವ ಸಂದೇಶವನ್ನು ಮೋಶೆಗೆ ಹೇಳಲು ಒಬ್ಬ ದೇವದೂತನು ಉರಿಯುವ ಪೊದೆಯೊಳಗೆ ಕಾಣಿಸಿಕೊಂಡನು. (ವಿಮೋಚನಕಾಂಡ 3:1, 2) ಪ್ರವಾದಿ ದಾನಿಯೇಲನನ್ನು ಸಿಂಹದ ಗವಿಯಲ್ಲಿ ಹಾಕಿದಾಗ, 'ದೇವರು ತನ್ನ ದೂತನನ್ನು ಕಳುಹಿಸಿ ಸಿಂಹಗಳ ಬಾಯಿಗಳನ್ನು ಬಂಧಿಸಿದನು.' —ದಾನಿಯೇಲ 6:22.

* ಬೈಬಲ್‌ನಲ್ಲಿ "ದೇವದೂತ" ಎಂಬ ಪದಕ್ಕಿರುವ ಮೂಲ ಹೀಬ್ರು ಮತ್ತು ಗ್ರೀಕ್ ಪದದ ಅಕ್ಷರಾರ್ಥವು 'ಸಂದೇಶವಾಹಕ' ಎಂದಾಗಿದೆ.

*'ಅಲ್ಲಿ ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಯೆಹೋವನ ದೂತನು ಮೋಶೆಗೆ ಕಾಣಿಸಿಕೊಂಡನು.' —ವಿಮೋಚನಕಾಂಡ 3:2.*

## ಈಗ ದೇವದೂತರು ಏನು ಮಾಡುತ್ತಿದ್ದಾರೆ?

**ಬೈಬಲ್ ಏನು ಹೇಳುತ್ತದೆ?** ದೇವದೂತರು ಈಗ ಮಾಡುತ್ತಿರುವ ಪ್ರತಿಯೊಂದು ಕೆಲಸವನ್ನು ನಾವು ತಿಳಿದುಕೊಳ್ಳಲು ಸಾಧ್ಯ ಇಲ್ಲ. ಆದರೆ, ಅವರು ಯಥಾರ್ಥ ಜನರಿಗೆ ದೇವರ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುವ ಕೆಲಸದಲ್ಲಿ ಒಳಗೂಡಿದ್ದಾರೆ ಎಂದು ಬೈಬಲ್ ಹೇಳುತ್ತದೆ.—ಅಪೊಸ್ತಲರ ಕಾರ್ಯಗಳು 8:26-35; 10:1-22; ಪ್ರಕಟನೆ 14:6, 7.

ಪೂರ್ವಜನಾದ ಯಾಕೋಬನಿಗೆ ಕನಸು ಬೀಳುವಂತೆ ಯೆಹೋವನು ಮಾಡಿದನು. ಆ ಕನಸಿನಲ್ಲಿ ದೇವದೂತರು 'ನಿಚ್ಚಣಿಗೆಯ' (ಏಣಿ) ಮೂಲಕ ಭೂಮಿಯಿಂದ ಸ್ವರ್ಗಕ್ಕೆ, ಸ್ವರ್ಗದಿಂದ ಭೂಮಿಗೆ ಹತ್ತುತ್ತಾ ಇಳಿಯುತ್ತಾ ಇದ್ದದ್ದನ್ನು ಕಂಡನು. (ಆದಿಕಾಂಡ 28:10-12) ಯಾಕೋಬನು ಕಂಡ ಆ ಕನಸಿನಿಂದ, ಅವನು ಯಾವ ನಿರ್ಣಯಕ್ಕೆ ಬಂದನೋ ನಾವು ಕೂಡ ಆ ನಿರ್ಣಯಕ್ಕೆ ಬರಬಹುದು. ಯಾರಿಗೆ ನೆರವಿನ ಅಗತ್ಯವಿದೆಯೋ ಅಂಥ ನಿಷ್ಠಾವಂತ ಜನರಿಗೆ ಸಹಾಯ ಮಾಡುವಂತೆ ಯೆಹೋವನು ದೇವದೂತರನ್ನು ಭೂಮಿಗೆ ಕಳುಹಿಸುತ್ತಾನೆ.—ಆದಿಕಾಂಡ 24:40; ವಿಮೋಚನಕಾಂಡ 14:19; ಕೀರ್ತನೆ 34:7. ■

*"ಆ ಕನಸಿನಲ್ಲಿ ಒಂದು ನಿಚ್ಚಣಿಗೆ ನೆಲದ ಮೇಲೆ ನಿಂತಿತ್ತು; ಅದರ ತುದಿ ಆಕಾಶವನ್ನು ಮುಟ್ಟಿತ್ತು; ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು."*
*—ಆದಿಕಾಂಡ 28:12.*



# ನೀರುನಾಯಿಯ ಕೂದಲು



Brian M. Guzzetti/Alaska Stock – Design Pics/Superstock

ನೀರಿನಲ್ಲಿ ಬದುಕುವ ಅನೇಕ ಪ್ರಾಣಿಗಳ ಚರ್ಮದ ಕೆಳಗೆ ಕೊಬ್ಬಿನ ದಪ್ಪ ಪದರ ಇರುತ್ತದೆ. ಇದರಿಂದ ನೀರು ಎಷ್ಟೇ ತಣ್ಣಗಿದ್ದರೂ ಅವುಗಳ ದೇಹ ಬೆಚ್ಚಗಿರಲು ಸಾಧ್ಯವಾಗುತ್ತದೆ. ಆದರೆ ನೀರುನಾಯಿಗೆ ಹಾಗಿಲ್ಲ. ಅವುಗಳಿಗೆ ಚಳಿಯಿಂದ ರಕ್ಷಿಸಲು ಅದರ ಮೈ ತುಂಬಾ ಒತ್ತೊತ್ತಾದ ಕೂದಲಿದೆ.

**ಪರಿಗಣಿಸಿ:** ನೀರುನಾಯಿಯ ಕೂದಲು ಬೇರೆ ಯಾವುದೇ ಪ್ರಾಣಿಯ ಕೂದಲಿಗಿಂತ ತುಂಬಾ ಒತ್ತೊತ್ತಾಗಿರುತ್ತದೆ. ಅದರ ಚರ್ಮದ ಒಂದು ಚದರ ಇಂಚಿನಲ್ಲಿ ಸುಮಾರು ಹತ್ತು ಲಕ್ಷದಷ್ಟು ಕೂದಲುಗಳಿರುತ್ತವೆ (ಒಂದು ಚದರ ಸೆಂ.ಮೀ.ಗೆ 1,55,000). ನೀರುನಾಯಿ ನೀರಿಗೆ ಇಳಿದಾಗ ಅದರ ಕೂದಲು ಮತ್ತು ದೇಹದ ಮಧ್ಯದಲ್ಲಿ ಗಾಳಿ ಉಳಿದುಕೊಳ್ಳುತ್ತದೆ. ಈ ಗಾಳಿ ಅದರ ಚರ್ಮಕ್ಕೆ ನೀರು ತಾಗದಂತೆ ತಡೆಯುತ್ತದೆ. ಹೀಗೆ ಅದರ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಈ ನೀರುನಾಯಿಯ ಕೂದಲಿನಿಂದ ವಿಜ್ಞಾನಿಗಳು ಒಂದು ವಿಷಯವನ್ನು ಕಲಿಯುತ್ತಿದ್ದಾರೆ. ಅವರು ಈ ವಿಧಾನವನ್ನು ಬಟ್ಟೆ ತಯಾರಿಕೆಯಲ್ಲಿ ಬಳಸಲು ಪ್ರಯತ್ನಿಸಿದ್ದಾರೆ. ಬಟ್ಟೆಗಳಲ್ಲಿನ ಕೂದಲಿನ ಉದ್ದ ಮತ್ತು ಅವುಗಳ ಮಧ್ಯೆ ಇರುವ ಅಂತರವನ್ನು ಬದಲಾಯಿಸುತ್ತಾ ಬೇರೆ ಬೇರೆ ರೀತಿಯಲ್ಲಿ ಕೃತಕ ಕೂದಲಿನ ಬಟ್ಟೆಗಳನ್ನು ತಯಾರಿಸಿದ್ದಾರೆ. "ಬಟ್ಟೆಯಲ್ಲಿನ ಕೂದಲು ಎಷ್ಟು ಹೆಚ್ಚು ಒತ್ತೊತ್ತಾಗಿ ಮತ್ತು ಉದ್ದುದ್ದವಾಗಿ ಇರುತ್ತದೋ ಅಂಥ ಬಟ್ಟೆಯು ನೀರಿನಿಂದ ಅಷ್ಟೇ ಹೆಚ್ಚು ಸಂರಕ್ಷಣೆ ನೀಡುತ್ತದೆ" ಎಂದು ಅವರಿಗೆ ತಿಳಿದುಬಂದಿದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನೀರುನಾಯಿಯ ಕೂದಲ ಹೊದಿಕೆ ಪ್ರಪಂಚದಲ್ಲೇ ಅತಿ ಉತ್ತಮವಾದದ್ದಾಗಿದೆ.

ಈ ಅಧ್ಯಯನದಿಂದ ತಂತ್ರಜ್ಞಾನದಲ್ಲಿ ಪ್ರಗತಿ ಮಾಡಿ ನೀರಿನಿಂದ ಸಂರಕ್ಷಣೆ ಪಡೆಯುವ ವಿಶೇಷ ಬಟ್ಟೆಯನ್ನು ತಯಾರಿಸಬಹುದು ಎಂದು ಸಂಶೋಧಕರು ಅಂದುಕೊಂಡಿದ್ದಾರೆ. ಹಾಗಾಗಿ, ಕೊರೆಯುವಷ್ಟು ತಣ್ಣಗಿರುವ ನೀರಿನಲ್ಲಿ ಹೋಗುವವರು ನೀರುನಾಯಿ ಕೂದಲಿನಂತೆ ಇರುವ ಈಜು ಬಟ್ಟೆಯನ್ನು ಹಾಕಿಕೊಳ್ಳುವುದು ಉತ್ತಮ ಎಂದು ಕೆಲವರು ಯೋಚಿಸುತ್ತಾರೆ.

**ನೀವೇನು ನೆನಸುತ್ತೀರಿ?** ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳುವ ನೀರುನಾಯಿಯ ಕೂದಲು ವಿಕಾಸವಾಗಿ ಬಂತಾ? ಅಥವಾ ಒಬ್ಬ ಸೃಷ್ಟಿಕರ್ತ ಇದನ್ನು ವಿನ್ಯಾಸಿಸಿದನಾ? ■

JW.ORG™

ಈ ಪತ್ರಿಕೆ ಮತ್ತು ಹಿಂದಿನ ಸಂಚಿಕೆಗಳನ್ನು ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು

ಆನ್‌ಲೈನ್‌ನಲ್ಲಿ ಬೈಬಲ್ ಸುಮಾರು 130 ಭಾಷೆಗಳಲ್ಲಿ ಲಭ್ಯ

www.jw.org/kn ನೋಡಿ ಅಥವಾ ಈ ಕೋಡ್ ಸ್ಕ್ಯಾನ್ ಮಾಡಿ

g17.1-KA
170320